# 9

# ಧನ್ಯತೆಗಳು

# (5:1-12)

ಮತ್ತಾಯನು ತನ್ನ ಸುವಾರ್ತೆಯಲ್ಲಿ ಸೇರಿಸಿದ ಪರ್ವತ ಪ್ರಸಂಗವು (ಅಧ್ಯಾಯ 5-7) ಪ್ರಥಮ ಬೋಧನಾ ಭಾಗವಾಗಿ ಉಪಯೋಗವಾಗುತ್ತದೆ. ಇದರೊಂದಿಗೆ, ಯೇಸು ಇಸ್ರಾಯೇಲರಿಗೆ ಅಂತಿಮ ಬೋಧಕನಾಗಿದ್ದನೆಂದು ಚಿತ್ರಿಕರಿಸಿದನು, ಆತನ ಮಾತುಗಳು ದೈವಿಕ ಅಧಿಕಾರದಿಂದ ಮತ್ತು ನಿತ್ಯ ಪರಿಣಾಮಗಳಿಂದ ಕೂಡಿದ್ದವೆಂದನು (7:21-29). ಆತನು ದಾಖಲಿಸಿದ ಈ ಪ್ರಸಂಗವು ನೀತಿ ವಿಷಯಗಳ ಸಂಗ್ರಹಗಳಿಗಿಂತ ಹೆಚ್ಚಾಗಿದೆ. ನಿತ್ಯಜೀವ ಸ್ವೀಕರಿಸುವವರ ಮೇಲೆ ಮೆಸ್ಸೀಯನಾದ ಯೇಸು ಸರ್ವೋಚ್ಚ ಅಧಿಕಾರ ಹೊಂದಿದ್ದಾನೆಂದು ಈ ಪ್ರಸಂಗ ಪ್ರತಿಬಿಂಬಿಸುತ್ತದೆ.[1]

ಪ್ರಸಂಗವು ಅತ್ಯಗತ್ಯವುಗಳನ್ನು ಹೇಳುವ ಬದಲು ಧನ್ಯತೆಯೊಂದಿಗೆ ಪ್ರಾರಂಭವಾಗುತ್ತದೆ. ತರುವಾಯ, ಶಾಸ್ತ್ರಿಗಳ ಮತ್ತು ಫರಿಸಾಯರ ದುರಂತಕಾರದ ನೀತಿಗಿಂತ ಅದು ಹೆಚ್ಚಾದ ಪ್ರಮಾಣ ಮಟ್ಟಕ್ಕೇರಿದೆ, ಆದಾಗ್ಯೂ, ಕೃಪೆಗೆ ಸಂಬಂಧಿಸಿದ ಸಂದರ್ಭವನ್ನು ಅದು ಯಾವಾಗಲು ಬಿಟ್ಟಿರುವುದಿಲ್ಲ.[2] ಇದುವೆ ಶ್ರೇಷ್ಟವಾದದ್ದು ಮತ್ತು ಪರಿಶುದ್ಧವಾದದ್ದು, ಆದರೆ ಇದು ಪ್ರಾಯೋಗಿಕವಾಗಿ ಮಾಡುವಂಥದ್ದಾಗಿದೆ. ಯೇಸುವಿನ ಅಧಿಕಾರಯುಕ್ತವಾದ ಬೋಧನೆಗಳು - ಈ ಪ್ರಸಂಗದಲ್ಲಿ ಸಂಕ್ಷಿಪ್ತಗೊಳಿಸಿ ಮತ್ತು ವಿತರಿಸಲಾಗಿದೆ - ಯೇಸು ಕೊಟ್ಟಿರುವ ಮಹಾ ನಿಯೋಗವನ್ನು ಇದರಲ್ಲಿ ನಿರೀಕ್ಷಿಸಲಾಗಿದೆ. ಆತನು ತನ್ನ ಅಪೊಸ್ತಲರಿಗೆ ಕೊಟ್ಟ ಅಂತಿಮ ಆದೇಶದಲ್ಲಿ, ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ ಮತ್ತು ಅವರಿಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳಲು ಅವರಿಗೆ ಬೋಧಿಸಬೇಕೆಂದು ಹೇಳಿದನು (28:18-20).

ಪರ್ವತ ಪ್ರಸಂಗದ ಸಂಕ್ಷಿಪ್ತ ವರ್ಣನೆ ನಿರ್ದಿಷ್ಟವಾದ ರೂಪದಲ್ಲಿ ವ್ಯಕ್ತಗೊಳಿಸುವದು ಕಷ್ಟಕರವಾಗಿದೆ. ಹಾಗಿದ್ದರೂ, ಈ ಪ್ರಸಂಗದ ಮುಖ್ಯ ಭಾಗವನ್ನು "ಧರ್ಮಶಾಸ್ತ್ರ" ಮತ್ತು "ಪ್ರವಾದಿಗಳು" ಎನ್ನುವವಗಳನ್ನು ಪ್ರಸ್ತಾಪಿಸಿ ರಚಿಸಲಾಗಿದೆ ಎಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ (5:17; 7:12). ಮುಂದೆ ಬರುವ ರೇಖಾಂಶವು ಯೇಸು ತನ್ನ ಬೋಧನೆಯಲ್ಲಿ ಹೇಳಿದ ವಿವಿಧ ಅಂಶಗಳ ಸಾಮಾನ್ಯ ವರ್ಣನೆಯನ್ನು ನಮ್ಮ ಮುಂದೆ ಇಟ್ಟಿದೆ.[3]

- I. ಪೀಠಿಕೆ (5:3-16)
  - A. ಧನ್ಯತೆಗಳು (5:3-12)
  - B. ಉಪ್ಪು ಮತ್ತು ಬೆಳಕು (5:13-16)
- II. ಮುಖ್ಯವಾದ ಭಾಗ (5:17-7:12)
  - A. ಹಳೆ ಮತ್ತು ಹೊಸ ನೀತಿ (5:17-48)
  - B. ಹೊರಗಡೆ ಮತ್ತು ಒಳಗಡೆ ನೀತಿ (6:1-18)
  - C. ದೇವರ ಮೇಲೆ ಆಧಾರಗೊಳ್ಳುವದು (6:19-34)
  - D. ವಿಧ ವಿಧವಾದ ಬೋಧನೆಗಳು ಮತ್ತು ಸ್ವರ್ಣ ನಿಯಮ (7:1-12)
- III. ಮುಕ್ತಾಯ (7:13-27)

A. ಎರಡು ಮಾರ್ಗಗಳು (7:13, 14)
B. ಸುಳ್ಳು ಮತ್ತು ನಿಷ್ಕಪಟ (7:15-23)
C. ಇಬ್ಬರು ಕಟ್ಟುವವರ ಸಾಮ್ಯ (7:24-27)

ಮತ್ತಾಯನ ಸುವಾರ್ತೆಯಲ್ಲಿರುವ ಪರ್ವತದ ಮೇಲೆ ಮಾಡಿದ ಪ್ರಸಂಗಕ್ಕೂ ಮತ್ತು ಲೂಕ ಸುವಾರ್ತೆಯಲ್ಲಿರುವ ಸಮ ಭೂಮಿಯಲ್ಲಿ (6:17-49) ಮಾಡಿದ ಪ್ರಸಂಗಕ್ಕೂ ಎರಡರ ಮಧ್ಯದಲ್ಲಿ ಹೋಲಿಕೆ ಮಾಡಬಹುದು. ವಾಸ್ತವವಾಗಿ, ಈ ಎರಡು ಪ್ರಸಂಗಗಳು ಒಂದೇ ಆಗಿವೆ, ಮತ್ತು ಪರ್ವತದ ಮೇಲೆ ಕೊಟ್ಟಿರುವ ಪ್ರಸಂಗವನ್ನು ಲೂಕನು ಉದ್ದವಾದ ಪ್ರಸಂಗದಿಂದ ಸರಳವಾಗಿ ಸಂಕ್ಷಿಪ್ತವಾಗಿ ಮಾಡಿದ್ದಾನೆಂದು ಒಂದು ದೃಷ್ಟಿಕೋನ ಇದೆ. ಅದರಲ್ಲಿರುವ ಅಂಶಗಳು, ಬಳಸಿರುವ ಭಾಷೆ ಮತ್ತು ಕ್ರಮಪದ್ಧತಿಗಳ ಹೋಲಿಕೆ ಇಂಥಹ ಅವಲೋಕನಕ್ಕೆ ಬರಲು ಸಾಧ್ಯವಾಯಿತು. ಅವೆರಡು ಪ್ರಸಂಗಗಳು ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಸಂಗಿಸಿದ ವಿಶಿಷ್ಟವಾದ ಪ್ರಸಂಗಗಳಾಗಿದ್ದವು ಎನ್ನುವದು ಇನ್ನೊಂದು ಅವಲೋಕನವಾಗಿದೆ.[4] ಅವುಗಳ ಮಧ್ಯದಲ್ಲಿ ಹೆಚ್ಚಿನ ವ್ಯತ್ಯಾಸಗಳು ಇರುತ್ತವೆ. ಉದಾಹರಣೆಗೆ, ಪ್ರಸಂಗವನ್ನು ಮಾಡಿದ ಸಂದರ್ಭದ ವರ್ಣನೆಯು ವ್ಯತ್ಯಾಸವಾಗಿ ಕಾಣುತ್ತದೆ: "ಪರ್ವತ" (5:1) ಅದಕ್ಕೆ ಪ್ರತಿಯಾಗಿ "ಸಮಭೂಮಿ" (ಲೂಕ 6:17). ಅದು ಮಾತ್ರವಲ್ಲದೆ, ಮತ್ತಾಯನು ಬರೆದ ಪ್ರಸಂಗದಲ್ಲಿ ಇಲ್ಲದ ಶ್ರಮೆಗಳು, ಮತ್ತು ಕಡಿಮೆಯ ಧನ್ಯತೆಗಳು (ಮತ್ತು ಕೆಲವು ವ್ಯತ್ಯಾಸವುಳ್ಳ ಶಬ್ದದಿಂದ ಹೇಳಲಾಗಿದೆ) ಲೂಕನ ಪ್ರಸಂಗದಲ್ಲಿ ಇವೆ (ಲೂಕ 6:20-26).

ಎರಡು ಪ್ರಸಂಗಗಳನ್ನು ಹೋಲಿಸಿ ನೋಡುವಾಗ, Jack P. Lewis ರವರು ಮುಂದಿನ ಸಂಕೇತಗಳಿಂದ ತೋರಿಸಿದ್ದಾರೆ:

1. ಎರಡು ಪ್ರಸಂಗಗಳು ಧನ್ಯತೆಗಳಿಂದ ಪ್ರಾರಂಭವಾಗುತ್ತವೆ (5:3-12; ಲೂಕ 6:20-22) ಮತ್ತು ಕಟ್ಟುವವರ ಸಾಮ್ಯದೊಂದಿಗೆ ಮುಕ್ತಾಯವಾಗುತ್ತವೆ (7:24-27; ಲೂಕ 6:47-49).
2. ಮತ್ತಾಯನಲ್ಲಿರುವ ಪ್ರಸಂಗವು (107 ವಚನಗಳು) ಲೂಕನಲ್ಲಿರುವ ಪ್ರಸಂಗಕ್ಕಿಂತಲೂ ಉದ್ದವಾಗಿದೆ (30 ವಚನಗಳು).
3. ಲೂಕನಲ್ಲಿರುವ ಪ್ರಸಂಗದ ಹೆಚ್ಚಿನ ಭಾಗವು ಮತ್ತಾಯನ ಪ್ರಸಂಗದಲ್ಲಿ ಇವೆ.
4. ಮತ್ತಾಯನಲ್ಲಿರುವ ಪ್ರಸಂಗದಲ್ಲಿ ಒಳಗೊಂಡಿರುವ ಅಂಶಗಳು ಲೂಕನ ಪ್ರಸಂಗದಲ್ಲಿ ಅಲ್ಲಲ್ಲಿ ಚದುರಿರುತ್ತವೆ (ಅಧ್ಯಾಯಗಳು 11, 12, 13, 14, 16).
5. ಮತ್ತಾಯನು ಬರೆದ ಪ್ರಸಂಗವು ಯೇಸು ಹನ್ನೆರಡು ಜನರನ್ನು ಆರಿಸಿ ಕೊಳ್ಳುವದಕ್ಕಿಂತ ಮುಂಚೆ ಕಾಣಿಸುತ್ತದೆ (10:1-4), ಆದರೆ ಲೂಕನ ಪ್ರಸಂಗದಲ್ಲಿ ಅದರ ನಂತರದ ಘಟನೆಗಳು ಒಳಗೊಂಡಿರುವದು ಕಾಣಿಸುತ್ತದೆ (ಲೂಕ 6:12-16).[5]

ಮತ್ತಾಯ ಮತ್ತು ಲೂಕ ಸುವಾರ್ತೆಯಲ್ಲಿನ ಈ ಸಂದೇಶಗಳನ್ನು ಪ್ರಸ್ತಾಪಿಸುವಾಗ ಆ ಕಾಲದಲ್ಲಿ ಭಿನ್ನತೆಯುಳ್ಳ ಅಂಶಗಳನ್ನು ಪ್ರಸ್ತಾಪ ಮಾಡಿರುವ ಸಾಧ್ಯತೆಗಳು ಇವೆ. ಏನೇ ಆದರೂ, ಯೇಸು ಬೇರೆ ಬೇರೆ ಜನರ ಸಮೂಹಕ್ಕೆ ಮತ್ತು ಬೇರೆ ಬೇರೆ ಜನರಿಗೆ ಕಲಿಸಿದನು ಮತ್ತು ತನ್ನಷ್ಟಕ್ಕೆ ತಾನೇ ಆತನು ಅನೇಕ ಬಾರಿ ಪುನರಾವರ್ತನೆ ಮಾಡಿದನೆಂಬುದು ಸಂಶಯವೇ ಇಲ್ಲ. ಪುನಃ, ಮತ್ತಾಯನು ಮತ್ತು ಲೂಕನು ಒಂದೇ ರೀತಿಯಲ್ಲಿರುವ ಸಂದೇಶವನ್ನು ವರದಿ ಮಾಡುತ್ತಿರಬಹುದು - ಮತ್ತಾಯನು ಪರ್ವತದ ಹಿನ್ನಲೆಯನ್ನು ಒತ್ತಿ ಹೇಳಿದ್ದಾನೆ ಮತ್ತು ಲೂಕನು ಪರ್ವತದ ಮೇಲಿನ ಸಮಭೂಮಿಯ ಹಿನ್ನಲೆಯನ್ನು ಒತ್ತಿ ಹೇಳಿದ್ದಾನೆ. ಏನೇ ಸಂಭವಿಸಿದರೂ ಯೇಸುವಿನ ವಿಷಯದೊಂದಿಗೆ ಹೊರತುಪಡಿಸಿ

ನೋಡುವಾಗ, ಪ್ರತಿಯೊಬ್ಬ ಬರಹಗಾರನು ತನ್ನ ಸುವಾರ್ತೆಗೆ ಅನುಗುಣವಾಗಿ ವಿಷಯಗಳನ್ನು ಆರಿಸಿಕೊಂಡಿರುತ್ತಾನೆಂದು ಅರ್ಥವಾಗುತ್ತದೆ. ಮತ್ತಾಯನು ವಿಶೇಷವಾಗಿ ಧರ್ಮಶಾಸ್ತ್ರ ಮತ್ತು ಯೆಹೂದ್ಯ ಜನರಿಗೆ ಸಂಬಂಧಪಟ್ಟಿರುವದನ್ನೇ ಬೋಧಿಸಲು ಆರಿಸಿಕೊಂಡಿದ್ದಾನೆ, ಇವುಗಳಲ್ಲಿ ಕೆಲವೊಂದು ಲೂಕ ಸುವಾರ್ತೆಯಲ್ಲಿ ಕಾಣುವುದಿಲ್ಲ, ಲೂಕನು ವಿಶೇಷವಾಗಿ ಅನ್ಯ ಜನರ ಓದುಗರಿಗೆ ಸರಿಹೊಂದುವ ವಿಷಯಗಳನ್ನು ಆರಿಸಿಕೊಂಡಿದ್ದಾನೆ.[6]

ಯೇಸು ಪರ್ವತ ಮೇಲೆ ಮಾಡಿದ ಪ್ರಸಂಗದಲ್ಲಿ, ಆತನು - ತನ್ನ ಪ್ರಂಸಗಕ್ಕೆ ಒಂದು ಪೀಠಿಕೆಯನ್ನು ಕೊಟ್ಟು - ಪ್ರಮಾಣಿಕವಾದ ನೀತಿ ಮತ್ತು ಸಂತೋಷದ ಕುರಿತು ಬೋಧಿಸುವದರ ಮುಖಾಂತರ ಪ್ರಾರಂಭ ಮಾಡಿದನು. ದೈವಿಕ ಜೀವಿತದ ಕುರಿತು ಆತನ ಹೇಳಿಕೆ ನೋಡುವದಾದರೆ ಇಂದಿನ ಸಂಸ್ಕೃತಿಯ ದೃಷ್ಟಿಕೋನಕ್ಕೆ ವ್ಯತಿರಿಕ್ತವಾಗಿದೆ. ಈ ಎಲ್ಲಾ ಮುಖ್ಯವಾದ ನಿಜವಾದ ನೀತಿಗೆ ಅವಶ್ಯಕವಾಗಿರುವ ಎಲ್ಲವುಗಳನ್ನು ಯೇಸುವಿನ ಹೇಳಿಕೆಗಳಲ್ಲಿ ಒಳಗೊಂಡು "ಧನ್ಯತೆಗಳು" ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಈ ಶಬ್ದವು *beatitudo* ಎಂಬ ಲ್ಯಾಟೀನ್ ಪದದಿಂದ ಬಂದಿರುತ್ತದೆ, *makarios* ಇದು ತಿರುಗಿ "ಸಂತೋಷ," "ಶುಭಸೂಚಕ" ಅಥವಾ "ಧನ್ಯತೆಗಳು" ಎಂಬುದಾಗಿ ಅರ್ಥಕೊಡುವ ಗ್ರೀಕ್ ಶಬ್ದದಿಂದ ಅನುವಾದವಾಗಿದೆ.

ದೇವರು ಸಂತೋಷಿಸುವ ನೀತಿವಂತನನ್ನು ವರ್ಣಿಸಲು ಯೇಸು *makarios* ಎಂಬ ಪದವನ್ನು ಈ ಹನ್ನೆರಡು ವಚನಗಳಲ್ಲಿ ಒಂಬತ್ತು ಸಾರಿ ಉಪಯೋಗಿಸಿದ್ದಾನೆ. "ಧನ್ಯಗಳು" ಎನ್ನುವ ಶಬ್ದ ಯಾವಾಗಲೂ ಬಹು ವಚನವಾಗಿದೆ. ದೈವಿಕ ಮನುಷ್ಯನು ಸ್ವೀಕರಿಸುವ ಸಂಪೂರ್ಣ ಸಂತೋಷವನ್ನು ಬಹುಶಃ ಸೂಚಿಸುತ್ತದೆ. ಈ ಪದವು ಉಪಯೋಗಿಸಿದ ಪ್ರತಿ ಸಂದರ್ಭದಲ್ಲಿ, ಹಿಂಬಾಲಿಸಿ ಅದನ್ನು ಪ್ರದರ್ಶಿಸುವ ವ್ಯಕ್ತಿಯ ವಿಶೇಷಗುಣದೊಂದಿಗೆ ಶ್ರೇಷ್ಟವಾದ ವಾಗ್ದಾನವು ಒಳಗೊಂಡಿದೆ.

ಈ ಧನ್ಯತೆಯಲ್ಲಿ ನೋಡಿದಂತೆ, ನಿಜವಾದ ಸಂತೋಷವು ನೀತಿಯ ಜೀವನದಿಂದ ಉಂಟು ಮಾಡುವಂತದ್ದಾಗಿದೆ. ಈ ಆತ್ಮೀಕ ಸಂತೋಷವು ಒಬ್ಬನ ಜೀವನದಲ್ಲಿ ಅನೇಕ ನಿರಾಶೆಗಳು ಇದ್ದಾಗ್ಯೂ ಅದು ಸಂತುಷ್ಟದಿಂದ ತುಂಬಿರುತ್ತದೆ (ಫಿಲಿಪ್ಪಿ 4:11, 12; 1 ತಿಮೋಥೆ 6:6-11).[7]

## ಪೀಠಿಕೆ (5:1, 2)

**[1]ಆತನು ಆ ಜನರ ಗುಂಪುಗಳನ್ನು ಕಂಡು ಬೆಟ್ಟವನ್ನೇರಿ ಕೂತುಕೊಂಡ ತರುವಾಯ ಆತನ ಶಿಷ್ಯರು ಆತನ ಬಳಿಗೆ ಬಂದರು. [2]ಆತನು ಅವರಿಗೆ ಉಪದೇಶ ಮಾಡಿ ಹೇಳಿದ್ದೇನಂದರೆ -**

**ವಚನಗಳು 1, 2. ಯೇಸು ... ಬೆಟ್ಟವನ್ನೇರಿದನು.** "ಬೆಟ್ಟಕ್ಕೆ" ಗ್ರೀಕ್ ಶಬ್ದ ಉನ್ನತವಾದ, ಎತ್ತರವಾದ ಸ್ಥಳಕ್ಕೆ ಸಂಬಂಧಪಟ್ಟದೆಂದು ಅರ್ಥಕೊಡುತ್ತದೆ (ನೋಡಿರಿ 14:23; 15:29). ಮತ್ತಾಯನು ಇತರ ಮುಖ್ಯ ಘಟನೆಗಳನ್ನು ಎತ್ತರವಾದ ಸ್ಥಳಗಳೊಂದಿಗೆ ಸಂಯೋಜಿಸಿದ್ದಾನೆ, ಅದರಲ್ಲಿ ಮೂರನೆಯ ಶೋಧನೆ (4:8), ರೂಪಾಂತರ ಹೊಂದಿರುವದು (17:1), ಮತ್ತು ಮಹಾ ನಿಯೋಗ (28:16) ಒಳಗೊಂಡಿರುತ್ತವೆ.

ಈ ವಾಕ್ಯಭಾಗವು ಸೀನಾಯಿ ಬೆಟ್ಟದ ಮೇಲೆ ಧರ್ಮಶಾಸ್ತ್ರವನ್ನು ಸ್ವೀಕರಿಸಿಕೊಂಡು ಹಳೆ ಒಡಂಬಡಿಕೆಯನ್ನು ಸ್ಥಾಪಿಸಿದ ಮೋಶೆಗೂ (ವಿಮೋಚನಕಾಂಡ 19-24), ಮತ್ತು ಹೊಸ ನಿಬಂಧನೆಗಾಗಿ ಬೆಟ್ಟದ ಮೇಲೆ ಹೊಸ ನೀತಿಯನ್ನು ಪ್ರಕಟಿಸಿದ ಯೇಸುವಿನ ಮಧ್ಯದಲ್ಲಿ ಒಂದು ಸಮಾನಾಂತರವನ್ನು ಉಂಟುಮಾಡುತ್ತಾ ಇದೆಯೋ? ಈ ಆಲೋಚನೆಯು ಸ್ಪಷ್ಟವಾಗಿ ಹೇಳದೆ ಇರುವಾಗಲೂ, ಮೋಶೆಯ ಮುಖಾಂತರ ಯೇಸು "ಪ್ರವಾದಿ"

ಯೆಂತಲೂ ಮತ್ತು ಆತನ ಅಧಿಕಾರದಿಂದ ಕೂಡಿರುವ ವಾಕ್ಯಗಳಿಗೆ ವಿಧೇಯರಾಗಲೇಬೇಕು ಎಂಬ ವಾಸ್ತವದೊಂದಿಗೆ ಅದು ಹೊಂದಿಕೆಯಾಗಿದೆ (ಧರ್ಮೋಪದೇಶಕಾಂಡ 18:15, 18; ಅಪೊಸ್ತಲರ ಕೃತ್ಯಗಳು 3:22, 23; 7:37; ನೋಡಿರಿ ಯೋಹಾನ 6:14; 7:40).

ಯೇಸು ಮಾಡಿದ ಪ್ರಸಂಗದ ಸ್ಥಳವನ್ನು ಬೇರೆ ಬೇರೆಯಾದವುಗಳೆಂದು ತೋರಿಸಲಾಗುತ್ತದೆ. ಅದರಲ್ಲಿ ಒಂದನ್ನು "the Horns of Hattin" ನನ್ನು "Karne Hittim" ಎಂದು ಕರೆಯಲಾಗುತ್ತದೆ, ಯಾಕೆಂದರೆ ಅದರಲ್ಲಿ ಎರಡು ಶಿಖರಗಳಿವೆ. ಈ ಸ್ಥಳವು ವಾಸ್ತವಿಕವಾಗಿ ತಿಬೇರಿಯಾದ ಹತ್ತಿರ ಅಗ್ನಿ ಪರ್ವತ ನಂದಿಹೋದ ಸ್ಥಳವಾಗಿರಬಹುದು. Frank L. Cox ಆ ಸ್ಥಳವನ್ನು ಈ ರೀತಿಯಾಗಿ ವರ್ಣಿಸಿದ್ದಾರೆ:

> ಸಮುದ್ರ ಮಟ್ಟದಿಂದ ಸುಮಾರು ಒಂದು ಸಾವಿರ ಅಡಿಗಳಷ್ಟು ಎತ್ತರದಲ್ಲಿ ಎರುತ್ತಾ, ಇದು ಅಕ್ಕಪಕ್ಕದಲ್ಲಿ "ಭಿನ್ನವಾದ ಎತ್ತರವುಳ್ಳ ಎರಡು ಡುಬ್ಬಗಳನ್ನು ಅಥವಾ ಕೊಂಬುಗಳಿಂದ ಗುರುತಿಸಲ್ಪಟ್ಟಿದೆ. ಅವುಗಳು ಅರವತ್ತು ಅಡಿ ಎತ್ತರದಲ್ಲಿದೆ ಮತ್ತು ಎತ್ತರವಾದ ಶಿಖರಕ್ಕೆ ಕೀಲಿಟವಿಟ್ಟಂತೆ ಎತ್ತರವಾಗಿದೆ. ಇವೆರಡರ ಎತ್ತರವಾದ ಡುಬ್ಬಗಳ ಮಧ್ಯದಲ್ಲಿ ರಂಗ ಸ್ಥಳದಂತೆ ಅಗಲವಾಗಿ ಹುಲ್ಲು ಆವರಿಸಿಕೊಂಡಿದೆ, ಅದರಲ್ಲಿ ಬಹುಜನರು ಮುಕ್ತವಾಗಿ ಆ ಹುಲ್ಲಿನಲ್ಲಿ ಜನ ಸಮೂಹ ಸೇರಿಬರುವಾಗ ಅದರಲ್ಲಿ ಒಂದೇ ಸ್ವರ ಕೇಳುತ್ತದೆ."[8]

ಬಹಳವಾಗಿ ಈ ಸ್ಥಳವು ಗಲಿಲಾಯ ಸಮುದ್ರದ ಉತ್ತರ ಭಾಗದ ಬೆಟ್ಟ ಗುಡ್ಡದಲ್ಲಿ ಇರಬಹುದು, ಕಪೆರ್ನೌಮ ಮತ್ತು ತಬುಗಾ ಮಧ್ಯದಲ್ಲಿದೆ. ಇಂದು ಇದನ್ನು ಧನ್ಯತೆ (ಪರಮನಂದ) ಬೆಟ್ಟವೆಂದು ಗುರುತಿಸಲಾಗುತ್ತದೆ. ಈ ಪರ್ವತದ ಪಕ್ಕದಲ್ಲಿ ಒಂದು ಪ್ರಾರ್ಥನ ಮಂದಿರವಿದೆ, ಯೇಸು ಪರ್ವತದ ಮೇಲೆ ಮಾಡಿರುವ ಪ್ರಸಂಗವನ್ನು ಅದು ಜ್ಞಾಪಕಮಾಡುತ್ತದೆ.

ನಿರ್ದಿಷ್ಟವಾಗಿ ಎಲ್ಲಿ ಈ ಪ್ರಸಂಗ ಮಾಡಲಾಯಿತು ಎಂದು ಯಾರಿಗೂ ಸ್ಪಷ್ಟವಾಗಿ ಗೊತ್ತಿರುವುದಿಲ್ಲ, ಇದು ಗಲಿಲಾಯಕ್ಕೆ ಹತ್ತಿರದಲ್ಲಿದೆಯೆಂದು ಖಚಿತವಾಗಿದೆ. ಇದು ಎಲ್ಲಿ ಕೊಡಲ್ಪಟ್ಟಿದೆ ಎಂದು ನಮಗೆ ಗೊತ್ತಿರದೆ ಇದಾಗ್ಯೂ ಉದ್ದೇಶ ಪೂರ್ವಕವಾಗಿ ಹೇಳಿದ್ದೆಲ್ಲವನ್ನು ನಾವು ತಿಳಿದುಕೊಳ್ಳಬೇಕೆಂದು ಮತ್ತಾಯನು ಖಚಿತಪಡಿಸಿದನು.

ಯೇಸು ಬೆಟ್ಟದ ಮೇಲೆ ಕೂತುಕೊಂಡನು. ಈ ವಿಧಾನವು ಯೆಹೂದ್ಯ ರಬ್ಬಿಗಳು ಬೋಧಿಸುವ ಸಂಪ್ರದಾಯಿಕ ಪದ್ಧತಿಯಾಗಿರಬಹುದು (13:2; 23:2; 24:3; 26:55). ತರುವಾಯ, ಆತನ **ಶಿಷ್ಯರು ಆತನ ಬಳಿಗೆ ಬಂದರು.** ಯೇಸುವಿನ "ಶಿಷ್ಯರು" ಮತ್ತು **ಜನ ಸಮೂಹಕ್ಕೂ** ಮಧ್ಯದಲ್ಲಿರುವ ಸರಿಯಾದ ಸಂಬಂಧವು ಸ್ಪಷ್ಟವಾಗಿ ವಿವರಿಸಿರುವದಿಲ್ಲ. ಈ ಹಿನ್ನಲೆಯಲ್ಲಿ ಯೇಸು ಮಾತಾಡುವದನ್ನು *ಮುಗಿಸಿದ ನಂತರ* ಆ ಜನರು ಪ್ರತಿಕ್ರಿಯೆ ತೋರಿಸುವುದರ ಮೂಖಾಂತರ ಜನ ಸಮೂಹದ ಕಾಣಿಸುವಿಕೆ ನಿಶ್ಚಯಪಡಿಸಲಾಯಿತು (7:28, 29).

ಲೂಕನಿಂದ ದಾಖಲಿಸಿದ ಈ ಪ್ರಸಂಗವು ಯೇಸು ಪರ್ವತದ ಮೇಲೆ ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಆರಿಸಿಕೊಂಡ ನಂತರ ಬರೆಯಲಾಗಿದೆ (ಲೂಕ 6:12-16). ಆ ಮೇಲೆ ಅವರು ಯೇಸುವಿನೊಂದಿಗೆ ಬೆಟ್ಟದಿಂದ ಇಳಿದು, "ಆತನ ಶಿಷ್ಯರ ದೊಡ್ಡ ಗುಂಪು"[9] ಮತ್ತು "ಎಲ್ಲಾ ಯೂದಾಯದಿಂದಲೂ ಯೆರೂಸಲೇಮಿನಿಂದಲೂ ತೂರ್ ಸಿದೋನ್ ಪಟ್ಟಣಗಳಿರುವ ಸಮುದ್ರ ತೀರದಿಂದಲೂ ಬಂದಿದ್ದ ಜನ ಸಮೂಹ" ಇರುವ "ಸಮ ಭೂಮಿಯ" ಸ್ಥಳಕ್ಕೆ ಬಂದರು (ಲೂಕ 6:17).

ಎಲ್ಲಾ ಜನರು ಸೇರಿಬಂದಾಗ, ಯೇಸು ಬಾಯಿತೆರೆದು **ಬೋಧಿಸಲು ಪ್ರಾರಂಭ ಮಾಡಿದನು.** ಮತ್ತಾಯನು ಉಪಯೋಗಿಸಿದ ಭಾಷೆಯು ಅದು ಶಾಸ್ತ್ರೋಕ್ತವಾಗಿದ್ದು ಮತ್ತು ಉನ್ನತ್ತವಾಗಿ ವರ್ಣಿಸಿದ್ದಾನೆಂದು ಸೂಚಿಸುತ್ತದೆ (ನೋಡಿರಿ ಅಪೊಸ್ತಲರ ಕೃತ್ಯಗಳು 8:35; 10:34). Douglas R. A. Hare ಹೀಗೆ ವಾಕ್ಯನಿಸಿದ್ದಾರೆ, "ಆತನು ರಾಜನಂತೆ

ಸಿಂಹಾಸನದಲ್ಲಿ ಕುಳಿತುಕೊಂಡಿದ್ದಾನೆ, ಆತನ ಶಿಷ್ಯರು ರಾಜನ ನ್ಯಾಯಲಯದಲ್ಲಿ ಆತನಿಗೆ ಒಳಪಟ್ಟ ನಾಗರೀಕರಂತೆ ಸಮೀಪಿಸಿದರು, ಮತ್ತು ರಾಜನು ತನ್ನ ಪ್ರಾರಂಭೋತ್ಸವದ ಭಾಷಣ ಮಾಡುವರು, ಅದರಲ್ಲಿ ಆತನು ತನ್ನ ರಾಜ್ಯದಲ್ಲಿ ಜೀವನ ಹೇಗಿರುತ್ತದೆ ಎನ್ನುವ ಅಂಶಗಳನ್ನು ಸೇರಿಸಿ ಕ್ರಮಬದ್ಧವಾಗಿ ಪ್ರದರ್ಶಿಸಿದನು."[10]

ಯೇಸುವಿನ ಮಾತುಗಳು ಕೆಲವು ಸಾರಿ ಹೊಸ ಒಪ್ಪಂದದ "ಹಕ್ಕುಗಳ ಶಾಸನ" ಎಂದು ಕರೆಯುತ್ತಿದ್ದರು.[11] ಈ ಎಲ್ಲಾ ಸೂತ್ರಗಳು ಹೊಸ ಒಡಂಬಡಿಕೆಯಲ್ಲಿ ಬೋಧಿಸಲಾಗಿದೆ ಮತ್ತು ಪ್ರತಿ ಕ್ರೈಸ್ತ ಜನಾಂಗದ ಉದ್ದೇಶಕ್ಕಾಗಿ ಇರುತ್ತವೆ. ಆತನ ಮಾತುಗಳು ಆದೇಶಗಳನ್ನು ಕೊಡುತ್ತವೆ, ಅವೆಲ್ಲವುಗಳನ್ನು ಹಿಂಬಾಲಿಸುವುದಾದರೆ, ಈ ಜೀವನದಲ್ಲಿ ಕಂಡುಕೊಳ್ಳಬಹುದಾದ ಸಂತೋಷಕ್ಕೆ ನಡಿಸುತ್ತವೆ.

## ಆತ್ಮದಲ್ಲಿ ಬಡವರಾಗಿರುವವರು (5:3)

**[3]ಆತ್ಮದಲ್ಲಿ ಬಡವರಾಗಿರುವವರು ಧನ್ಯರು: ಪರಲೋಕ ರಾಜ್ಯವು ಅವರದು.**

**ವಚನ 3.** ಗ್ರೀಕ್ ಭಾಷೆಯಲ್ಲಿ **ಬಡವರು** ಎಂಬ ಅರ್ಥಕೊಡುವ ಗ್ರೀಕ್ ಪದವು ದರಿದ್ರರಾಗಿದ್ದವರಿಗೆ ಮತ್ತು ಇನ್ನೊಬ್ಬರ ಮೇಲೆ ಆತುಕೊಂಡವರಿಗೆ ಉಪಯೋಗಿಸಲಾಗಿದೆ. ಕೀರ್ತನೆಯ ಭಾಗದಲೆಲ್ಲಾ ದುಷ್ಟ ಶ್ರೀಮಂತನು ಆತ್ಮದಲ್ಲಿ ಬಡವನಾಗಿರುವವನನ್ನು ತುಳಿದಿರುವದನ್ನು ವರ್ಣಿಸಲಾಗಿದೆ; ಆದಾಗ್ಯೂ ಇಂಥಹ ಜನರನ್ನು ಅವರ ಸಮಸ್ಯೆಗಳಿಂದ ದೇವರು ಬಿಡುಗಡೆ ಮಾಡಿದ್ದಾನೆ.[12] ದೇವರು ದೀನರ ಮತ್ತು ಬಡವರ ಮೇಲೆ ದಯವನ್ನು ತೋರುವನು ಆದರೆ ಉನ್ನತ ಸ್ಥಿತಿಯಲ್ಲಿರುವವರನ್ನು ಬರಿಗೈಯಿಂದ ಕಳುಹಿಸುತ್ತಾನೆ ಎಂಬ ಸಮಾನವಾದ ವಿಷಯವು ಮರಿಯಳ ಹಾಡಿನಲ್ಲಿ ಕಾಣುತ್ತದೆ (ಲೂಕ 1:46-55). ಪ್ರವಾದನೆಯ ನೆರವೇರುವಿಕೆಯಲ್ಲಿ, ಯೇಸು "ಬಡವರಿಗೆ ಶುಭವರ್ತಮಾನವನ್ನು ಸಾರುವದಕ್ಕೆ" ಮತ್ತು "ಸೆರೆಯವರಿಗೆ ಬಿಡುಗಡೆಯಾಗುವದನ್ನು ... ಪ್ರಸಿದ್ಧಿ ಪಡಿಸಲು ಬಂದನು" ಎಂದು ಹೇಳಿದನು (ಲೂಕ 4:18; ನೋಡಿರಿ ಯೆಶಾಯ 61:1). ಹೊಸ ಒಡಂಬಡಿಕೆಯ ಕಾಲದಲ್ಲಿ, ಬಡವರು ದೇವರ ಮೇಲೆ ಆತುಕೊಳ್ಳುವಂತೆ ನಡೆಸಲ್ಪಟ್ಟರು, ಮತ್ತು ನೀತಿವಂತರಾದ ಬಡವರು ವಿಶೇಷವಾದ ಮಾರ್ಗದಲ್ಲಿ ದೇವರಿಗೆ ವಿಶೇಷವಾದ ಆಸಕ್ತ ರಾಗಿರುವ ಉದ್ದೇಶಿತ ಜನರಾಗಿ ಪ್ರವಾದಿಗಳಿಂದಲೂ ಮತ್ತು ಇತರ ಜನರಿಂದಲೂ ಆಲೋಚಿ ಸಲ್ಪಟ್ಟರು.[13] ಈ ಆಲೋಚನೆಯನ್ನು ಮನಸ್ಸಿನಲಿಟ್ಟುಕೊಂಡು, ಲೂಕನು ಬರೆದ "ಬಡವ" ಎಂಬ ಪದವು ಅಪೂರ್ಣವಾದದ್ದಾರೆ ಆಶ್ಚರ್ಯಪಡುವ ಅವಸರವಿಲ್ಲ (ಲೂಕ 6:20).

ಲೂಕನ ತರಹವಲ್ಲದೆ, **ಆತ್ಮದಲ್ಲಿ** ಎನ್ನುವ ಪದವನ್ನು ಮತ್ತಾಯನು ಸೇರಿಸಿದ್ದಾನೆ. ಆತ್ಮದಲ್ಲಿ ಬಡವರಾಗಿರುವವರು ಅಂದರೆ ಒಬ್ಬನು ಆತ್ಮೀಯ ಅಗತ್ಯತೆಗಳನ್ನು ಮುಟ್ಟಲು ಅವನಲ್ಲಿರುವ ಸಂಪನ್ಮೂಲಗಳು ಪರಿಪೂರ್ಣವಾಗಿಲ್ಲವೆಂದು ಗುರುತಿಸುವವನಾಗಿದ್ದಾನೆಂದು ಅರ್ಥ. "ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೆ ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವುದಿಲ್ಲ ..." ಎಂದು ಕೀರ್ತನೆಗಾರನು ಬರೆದಿದ್ದಾನೆ (ಕೀರ್ತನೆ 51:17). ತಾನೆ ನೀತಿವಂತನೆಂದುಕೊಂಡ ಫರಿಸಾಯನು ದೀನತೆಯುಳ್ಳ ಸುಂಕದವನ ಕುರಿತು ಭಿನ್ನವಾಗಿ ಹೇಳಿರುವ ಒಂದು ಸಾಮ್ಯವನ್ನು ಯೇಸು ಹೇಳಿದ್ದಾನೆ. ಫರಿಸಾಯನು ಪ್ರಾರ್ಥಿಸುವಾಗ ತನ್ನನ್ನೆ ಹೊಗಳಿಕೊಳ್ಳುತ್ತಿದ್ದಾನೆ, ಸುಂಕದವನು ಕೂಗಿ, "ದೇವರೆ ಪಾಪಿಯಾದ ನನ್ನನ್ನು ಕರುಣಿಸು!" ಎಂದು ತಗ್ಗಿಸಿಕೊಂಡು ಪ್ರಾರ್ಥಿಸಿದನು (ಲೂಕ 18:9-14). ಸ್ವನೀತಿಯ ಮನೋಭಾವವುಳ್ಳ ಮತ್ತು ಕೊರತೆಯಿಲ್ಲದವರೆಂದು ಅಂದುಕೊಂಡಿರುವ ಲವೊದಿಕೆಯ ಸಭೆಯ ಕ್ರೈಸ್ತರಿಗೆ ಯೇಸು ಪ್ರಕಟಣೆ 3:17ರಲ್ಲಿ ಗದರಿಸಿದನು. "ನಾನು ಐಶ್ವರ್ಯವಂತನು, ಸಂಪನ್ನನು, ಒಂದರಲ್ಲಿಯೂ ಕೊರತೆಯಿಲ್ಲದವನು ಎಂದು ಹೇಳಿಕೊಳ್ಳುತ್ತೀ; ಆದರೆ

ನೀನು ಕೇವಲ ದುರವಸ್ಥೆಯಲ್ಲಿ ಬಿದ್ದಿರುವಂಥವನು, ದೌರ್ಭಾಗ್ಯನು, ದರಿದ್ರನು, ಕುರುಡನು, ಬಟ್ಟೆಯಿಲ್ಲದವನು ಆಗಿರುವದನ್ನು ತಿಳಿಯದೆ ಇದ್ದೀ" ಎಂದು ಹೇಳಿದನು.

"ಆತ್ಮದಲ್ಲಿ ಬಡವರಾಗಿರುವದು," ಅದು ಆತ್ಮದಲ್ಲಿ ಗರ್ವ ಮತ್ತು ಸ್ವನೀತಿಗೆ ವಿರುದ್ಧವಾಗಿದೆ. ಇದುವೆ ಆತ್ಮದಲ್ಲಿ ದೀನರಾಗಿರುವದು. ಇದು ಕರ್ತನ ಧನ್ಯತೆಯ ಪಟ್ಟಿಯಲ್ಲಿ ಪ್ರಥಮವಾಗಿ ಬರುತ್ತದೆ ಯಾಕೆಂದರೆ ಇದಿಲ್ಲದೆ ನಂತರ ಪಟ್ಟಿಯಲ್ಲಿ ವ್ಯಕ್ತಪಡಿಸಿದ ಭಾವನೆಗಳನ್ನು ಅಂಗೀಕರಿಸಲಾಗದು.

"ಆತ್ಮದಲ್ಲಿ ಬಡವರಾಗಿರುವವರು" **ಪರಲೋಕ ರಾಜ್ಯವನ್ನು ಹೊಂದುವರು** ಎಂದು ಯೇಸು ಹೇಳಿದನು (ನೋಡಿರಿ 3:2ರ ಮೇಲಿನ ವ್ಯಾಖ್ಯಾನ). ಯಾರು ಆತ್ಮೀಕ ಮುರಿದ ಹೃದಯವುಳ್ಳವರಾಗಿ ದೇವರ ಹತ್ತಿರ ಬರುತ್ತಾರೋ ಅವರನ್ನು ದೇವರು ಸರಿಮಾಡುವನು. "ಉನ್ನತ ಲೋಕವೆಂಬ ಪವಿತ್ರಾಲಯದಲ್ಲಿ ವಾಸಿಸುವ ನಾನು ... ದೀನನ ಆತ್ಮವನ್ನು ("ದೀನತೆ"; NKJV) ಜಜ್ಜಿಹೋದ ಮನಸ್ಸನ್ನು ಉಜ್ಜೀವಿಸುವವನಾಗಿದ್ದೇನೆ" ಎಂದು ದೇವರು ಯೆಶಾಯ ಪ್ರವಾದಿ ಮುಖಾಂತರ ಮಾತನಾಡಿದ್ದಾನೆ (ಯೆಶಾಯ 57:15). ಯಾರು ತಮ್ಮ ಜೀವಿತವನ್ನು ದೇವರ ಅಧೀನತೆಗೆ ಕೊಡುತ್ತಾರೋ ಅಂತವರನ್ನು ದೇವರು ಉನ್ನತಿಗೆ ತರುವನು. "ಕರ್ತನ ಮುಂದೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆಗ ಆತನು ನಿಮ್ಮನ್ನು ಮೇಲಕ್ಕೆ ತರುವನು" ಎಂದು ಯಾಕೋಬನು ಬರೆದಿದ್ದಾನೆ (ಯಾಕೋಬ 4:10; ನೋಡಿರಿ ಜ್ಞಾನೋಕ್ತಿ 29:23).

## ದುಃಖಪಡುವವರು (5:4)

**[4]ದುಃಖಪಡುವವರು ಧನ್ಯರು; ಅವರು ಸಮಾಧಾನ ಹೊಂದುವರು.**

**ವಚನ 4.** ಗ್ರೀಕ್ ಭಾಷೆಯಲ್ಲಿ ಉಪಯೋಗಿಸಿದ ಅನೇಕ ಶಬ್ದಗಳಲ್ಲಿ **ದುಃಖ** ಪಡುವವರು ಎಂಬುದು ತುಂಬಾ ಬಲವುಳ್ಳ ಮತ್ತು ಬಹಳ ಕಠೋರವಾದ ದುಃಖವನ್ನು ಅಥವಾ ಶೋಕ ವನ್ನು ವ್ಯಕ್ತಪಡಿಸುವಂತದ್ದಾಗಿದೆ. ಇದು ಒಬ್ಬ ವ್ಯಕ್ತಿಯು ತನಗೆ ಪ್ರೀತಿಯುಳ್ಳ ವ್ಯಕ್ತಿಯನ್ನು ಕಳೆದುಕೊಳ್ಳುವಾಗ ಅನುಭವಿಸುವ ನೋವನ್ನು ವರ್ಣಿಸುವಂಥದ್ದಾಗಿದೆ (ಆದಿಕಾಂಡ 23:2; 37:34, 35; 50:3 [LXX]; ಮಾರ್ಕ 16:10). ಇಂಥಹ ದುಃಖವು ಒಬ್ಬ ವ್ಯಕ್ತಿಯನ್ನು ಬಿಡದೆ ಹಿಡಿದುಕೊಳ್ಳುತ್ತದೆ ಮತ್ತು ಆತನನ್ನು ಬಿಟ್ಟುಹೋಗುವದಿಲ್ಲ. ಇಂಥಹ ದುಃಖವು ಆಗಾಗ ಪ್ರಲಾಪದಿಂದ ಮತ್ತು ಅಳುವದರಿಂದ ತೋರ್ಪಡಿಸಿಕೊಳ್ಳುವಂತದ್ದಾಗಿದೆ. ವಾಸ್ತವವಾಗಿ, "ದುಃಖ" ಮತ್ತು "ಅಳು" ಈ ಶಬ್ದಗಳು ಒಟ್ಟಾಗಿ ಬೈಬಲ್‌ನಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತದೆ. ಈ ಕಾರಣದಿಂದ, ಇದಕ್ಕೆ ಸಮರೂಪವಾದ ಲೂಕನ ಸುವಾರ್ತೆಯಲ್ಲಿರುವ ಧನ್ಯತೆ "ಅಳು"ವವರ ಮೇಲೆ ಆಶೀರ್ವಾದವು ಬರುತ್ತದೆಂದು ಹೇಳುತ್ತದೆ (ಲೂಕ 6:21).

ಹಾಗಿದ್ದರೂ, ಒಬ್ಬನು ತನ್ನ ಪ್ರೀತಿಯುಳ್ಳ ವ್ಯಕ್ತಿಯನ್ನು ಕಳೆದುಕೊಂಡವನ ದುಃಖದ ಮೇಲೆ ಯೇಸು ಚರ್ಚೆಮಾಡಿದ್ದಾನೆಂಬುದು ಸಂಶಯವುಳ್ಳದ್ದಾಗಿದೆ. ಸ್ಪಷ್ಟವಾಗಿ, ಧನ್ಯತೆಯ ಹಿನ್ನಲೆಯಲ್ಲಿ ಮೆಸ್ಸೀಯನು "ದುಃಖಿತರೆಲ್ಲರನ್ನು ಸಂತೈಸುವನು" ಎಂದು ಯೆಶಾಯ 61:2ರಲ್ಲಿ ಮೊದಲೆ ಹೇಳಲಾಗಿತ್ತು. ಪ್ರಾಚೀನ ಇಸ್ರಾಯೇಲಿನವರಲ್ಲಿ ದುಃಖಪಡುವವರು ಜನರ ಪಾಪಗಳಿಗಾಗಿ ಮತ್ತು ತದನಂತರದ ದೇವರಿಂದ ಬಂದ ತೀರ್ಪಿಗಾಗಿ ದುಃಖಪಡುತ್ತಿದ್ದರು. ದೇವರಿಂದ ಆರಿಸಿಕೊಂಡ ಜನರ ಮೇಲೆ ದುಷ್ಟ ಅನ್ಯ ಜನರು ಜಯಹೊಂದುವ ಆಲೋ ಚನೆಯ ಬಗ್ಗೆ ಅವರು ಶೋಭೆಗೊಂಡಿದ್ದರು. ಅದಕ್ಕೆ ಒಂದು ಉದಾಹರಣೆ ಯೆರೆಮೀಯಾ, ಯೆರೂಸಲೇಮಿಗಾಗಿ ಅತ್ತಿರುವದು (ಯೆರೆಮೀಯಾ 9:1, 18; 13:17; 14:17). ಪ್ರಲಾಪಗಳಲ್ಲಿ, ಪಾಪಕ್ಕಾಗಿ ದೇವರ ಪಟ್ಟಣವಾದ ಯೆರೂಸಲೇಮ ನಾಶನಮಾಡಿದಾಗ ಆತನು ದುಃಖಪಟ್ಟನು.

ನೀತಿಯತೆಯು ಕೆಲವು ಸಮಯಗಳಲ್ಲಿ ದುಃಖವನ್ನು ತರುತ್ತದೆ. "ನೀತಿಯುಳ್ಳ ಲೋಟನು" "ಅವರ ಅನ್ಯ ಕೃತ್ಯಗಳನ್ನು ನೋಡುತ್ತಾ ಕೇಳುತ್ತಾ ಅವುಗಳ ನಿಮಿತ್ತ ದಿನೇ ದಿನೇ ತನ್ನ ನೀತಿಯುಳ್ಳ ಆತ್ಮದಲ್ಲಿ ಬಹಳವಾಗಿ ಕನಿಕರಗೊಂಡನು." ಅಧರ್ಮಿಗಳ ನಡುವೆ ಜೀವಿಸುವುದು ಆತನಿಗೆ ವೇದನೆಯನ್ನುಂಟು ಮಾಡಿತು (2 ಪೇತ್ರನು 2:6-8). ಯೇಸು, "ಸಂಕಷ್ಟಕ್ಕೊಳಗಾದವನೂ, ವ್ಯಾಧಿಪೀಡಿತನೂ" (ಯೆಶಾಯ 53:3), ದಂಗೆಗೆ ಒಳಗಾದ ಯೆರೊಸಲೇಮನ್ನು ನೋಡಿ ಅತ್ತವನು (ಲೂಕ 19:41-44). ಇದು ಮಾತ್ರವಲ್ಲದೆ, ಯೆಹೂದ್ಯರು ಯೇಸುವನ್ನು ಮೆಸ್ಸೀಯನೆಂದು ಸ್ವೀಕರಿಸದೆ ಹೋದಾಗ ಪೌಲನು ದುಃಖಪಟ್ಟುಕೊಂಡನು (ರೋಮಾಪುರ 9:1-3).

ನೀತಿಯುಳ್ಳವರಾಗಿ ದುಃಖಪಡುವವರು ತಮ್ಮ ಸ್ವಂತ ಪಾಪಗಳ ನಿಮಿತ್ತ ದುಃಖಕ್ಕೆ ಒಳಗಾಗುತ್ತಾರೆ (ಕೀರ್ತನೆ 51:1-4, 7-12). ಯಾವಾಗ ತನ್ನ ಪಾಪಗಳ ನಿಮಿತ್ತ ದೇವರ ಹೃದಯ ಹೊಡೆಯುತ್ತಾನೆಂದು ಒಬ್ಬನು ತಿಳಿದುಕೊಳ್ಳುವನೋ ಆಗ ಅವನು ನಿಜವಾಗಿಯೂ ಬದಲಾವಣೆ ಹೊಂದಲು ಯೋಗ್ಯನಾಗಿದ್ದಾನೆ. "ದೇವರ ಚಿತ್ತಾನುಸಾರವಾಗಿರುವ ದುಃಖವು ಮಾನಸಾಂತರವನ್ನುಂಟು ಮಾಡಿ ರಕ್ಷಣೆಗೆ ಕಾರಣವಾಗಿದೆ" ಎಂದು ಪೌಲನು ಹೇಳಿದ್ದಾನೆ (2 ಕೊರಿಂಥ 7:10; NIV).

ಸತ್ಯವು ಇದಾಗಿದೆ: ಯಾರು ಅವರ ಮತ್ತು ಇತರರ ಪಾಪಗಳಿಗಾಗಿ ದುಃಖಪಡುವರೋ ಅವರು **ಸಮಾಧಾನ ಹೊಂದುವರು.** ನೀತಿಯುಳ್ಳವರಾಗಿ ದುಃಖಿಸುವವರು ದೇವರು ವೈಯಕ್ತಿಕ ಪಾಪಗಳನ್ನು ಕ್ಷಮಿಸುವನು ಮತ್ತು ಆತನು ಅವರೊಂದಿಗೆ ಇರುವರು ಎಂದು ತಿಳಿದುಕೊಂಡು ದೇವರಿಂದ ಸಮಾಧಾನವನ್ನು ಹೊಂದುವರು (11:28-30; 28:18-20; ಅಪೊಸ್ತಲರ ಕೃತ್ಯಗಳು 2:38; 1 ಯೋಹಾನ 1:7, 9). ಮುಂದೆ ಬರುವ ಜೀವನದಲ್ಲಿ ಅಂತಿಮ ಸಮಾಧಾನವನ್ನು ಅನುಭವಿಸುವರು (ಲೂಕ 16:25), ಆಗ "ಸಕಲ ವಿಧವಾಗಿ ಸಂತೈಸುವ ದೇವರು" (2 ಕೊರಿಂಥ 1:3) "ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು" (ಪ್ರಕಟಣೆ 7:17; 21:4).

## ಶಾಂತರು (5:5)

**5 ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು.**

**ವಚನ 5. ಶಾಂತರು** ಎನ್ನುವ ಶಬ್ದವನ್ನು "ನಮ್ರತೆ" ಎಂದು (KJV)ಯಲ್ಲಿ ಅನುವಾದಿಸಿದ್ದಾರೆ. "ಸೌಮ್ಯ" ಅಥವಾ "ಮೃದು" ಎಂದು ಇದರ ಪ್ರಾಥಮಿಕ ಅರ್ಥವಾಗಿದೆ. ಹಾಗಿದ್ದರೂ, "ನಮ್ರವಾಗಿರುವದು" ಅಂದರೆ "ಬಲಹೀನವಾಗಿ"ರುವದು ಎಂದರ್ಥವಲ್ಲ. "*praus* ನಲ್ಲಿ ಶಾಂತತೆ ಇದೆ. ಆದರೆ ಶಾಂತತೆಯ ಹಿಂದೆ ಉಕ್ಕಿನಂತಹ ಬಲವಿದೆ ... ಆ ಬಲವು ಆಧೀನದಲ್ಲಿರುವಂತದ್ದಾಗಿದೆ."[14]

ಆಂಗ್ಲ ಶಬ್ದ "ನಮ್ರತೆ" ಕೆಲವು ಸಾರಿ ಗೌರವಕ್ಕಿಂತಲೂ ಕಡಿಮೆಯಾಗಿರುವದನ್ನೂ, ಬಲಹೀನತೆಯನ್ನೂ ಬೆನ್ನಲುಬು ಇಲ್ಲದವನನ್ನೂ ವರ್ಣಿಸುತ್ತದೆ, ಆದರೆ ಪ್ರಾಚೀನ ಗ್ರೀಕ್‌ನಲ್ಲಿ ಇಂತಹ ಅರ್ಥವಿರುವದಿಲ್ಲ. *Praus* ಎನ್ನುವದು ಗ್ರೀಕ್ ಸಂಸ್ಕೃತಿಯ ಶ್ರೇಷ್ಟವಾದ ನೀತಿ ತತ್ವವನ್ನು ಪ್ರತಿನಿಧಿಸುತ್ತದೆ. ಭಾಷಾಂತರಕಾರನು ಈ ಶಬ್ದದ ಕುರಿತು ಸಂದಿಗ್ಧತೆ ಹೊಂದಿದನೆಂದು William Barclay ರವರು ವರ್ಣಿಸಿದಾರೆ. "ಆಂಗ್ಲ ಭಾಷೆಯ ಯಾವುದೇ ಶಬ್ದದಿಂದ ... ಅದನ್ನು ಅನುವಾದಿಸಲಾಗದು, ಆದಾಗ್ಯೂ *ಶಾಂತರು* ಎನ್ನುವ ಶಬ್ದವು ಅದರ ಹತ್ತಿರದ ಅರ್ಥಕ್ಕೆ ಬರುತ್ತದೆ." ಆತನು ಆ ವಾಕ್ಯ ಭಾಗಕ್ಕೆ ವಿಸ್ತರಿಸಲ್ಪಟ್ಟಿರುವ ಭಾವಾರ್ಥಕೊಟ್ಟಿದ್ದಾನೆ:

> ಓ ಅತ್ಯಾನಂದವುಳ್ಳ ಮನುಷ್ಯನೇ ಯಾವಾಗಲು ಸರಿಯಾದ ಸಮಯದಲ್ಲಿ ಕೋಪಿಸಿಕೊಳ್ಳುವವನು ಮತ್ತು ತಪ್ಪಾದ ಸಮಯದಲ್ಲಿ ಕೋಪವನ್ನೇ ಮಾಡಿಕೊಳ್ಳದವನು, ಇದು ಅವನ ಸಹಜ ಪ್ರವೃತ್ತಿ, ಮತ್ತು ಮನಸ್ಸಿನ ಆವೇಗ, ಮತ್ತು ಶೈಲಿಯು ಅಧೀನತೆಯಲ್ಲಿದೆ ಯಾಕೆಂದರೆ ಅವನದೆಲ್ಲಾ ದೇವರು ನಿಯಂತ್ರಿಸುತ್ತಿದ್ದಾನೆ. ತನ್ನ ಅಜ್ಞಾನ ಗ್ರಹಿಸಲು ಮತ್ತು ಬಲಹೀನತೆ ಗ್ರಹಿಸಲು ಮಾನವೀಯತೆ ಅವನಿಗಿದೆ, ಇಂಥಂಹ ವ್ಯಕ್ತಿಯು ಅನೇಕ ಮನುಷ್ಯರೊಳಗೆ ರಾಜನಂತಿರುವನು![15]

ನಮ್ರತೆ ಇರುವ ಮನುಷ್ಯನು ಸರಿಯಾದ ಸಮಯದಲ್ಲಿ ಸರಿಯಾದ ವಿಷಯಗಳಿಗಾಗಿ ಕೋಪಿಸಿಕೊಳ್ಳುವನು. ಈ ಮನುಷ್ಯನು ತನ್ನ ಸ್ವಂತ ಅವಮಾನಕ್ಕಿಂತಲೂ ಸಮಾಜದಲ್ಲಿರುವ ಅನ್ಯಾಯವನ್ನು ಗುರುತಿಸುವ ವ್ಯಕ್ತಿಯಾಗಿರುವನು. ನಿಜವಾಗಿಯು ಅಂಥಹಾ ವ್ಯಕ್ತಿಗಳನ್ನು ಬಲಹೀನತೆ ಅಥವಾ ಅಸುರಕ್ಷತೆವುಳ್ಳವರಾಗಿ ಪರಿಗಣಿಸುವದಕ್ಕೆ ಬದಲಾಗಿ, ನಾವು ಮುಂದೆ Barclay ಹೇಳಿರುವದನ್ನು ಒಪ್ಪಲೇಬೇಕಾಗಿದೆ, "ಇಂಥಹಾ ನಿಯಂತ್ರಣ ಬಹುಮಾನಹೊಂದಿದ, ಭಾವೋದ್ರೇಗ, ಸಹಜ ಪ್ರವೃತ್ತಿ, ಮತ್ತು ಮನಸ್ಸಿನ ಅತಿವೇಗಗಳನ್ನು ಶಿಸ್ತಿಗೆ ಒಳಪಡಿಸಿಕೊಳ್ಳುವವನು ಯಾವಾಗಲು ಶ್ರೇಷ್ಟನೆನಿಸಿಕೊಳ್ಳುವನು ಎಂಬುದು ಇತಿಹಾಸ ಹೇಳುವ ಸತ್ಯಾಂಶವಾಗಿದೆ."[16]

ಈ *praus* ಎನ್ನುವ ಶಬ್ದವು ಯೇಸುವನ್ನೂ ಮೋಶೆಯನ್ನೂ ವರ್ಣಿಸಲು ಉಪಯೋಗಿಸಲಾಗಿದೆ. "ಮೋಶೆಯು ಭೂಮಿಯ ಮೇಲಿರುವ ಎಲ್ಲಾ ಮನುಷ್ಯರಿಗಿಂತಲೂ [*praus*; LXX], ಸಾತ್ವಿಕನು" ಎಂದು ಅರಣ್ಯಕಾಂಡ 12:3ರಲ್ಲಿ ಹೇಳಲಾಗಿದೆ (KJV). ತನ್ನನ್ನು ತಾನೇ ವರ್ಣಿಸುತ್ತಾ, ಯೇಸು ಆತನು "ಸಾತ್ವಿಕನೂ [*praus*] ದೀನ ಮನಸುಳ್ಳವನೂ" ಎಂದು ಹೇಳಿದನು (11:29; ನೋಡಿರಿ 21:5). ಈ ಇಬ್ಬರಲ್ಲಿಯೂ ಯಾರೋಬ್ಬರಲ್ಲಿ ಬಲಹೀನತೆ ಇಲ್ಲ. ಅವರು ಶ್ರೇಷ್ಟ ಬಲವುಳ್ಳ ಮತ್ತು ಸಾಮರ್ಥ್ಯವುಳ್ಳ ಜನರು ಆಗಿದ್ದರು, ಆದರೆ ಅವರು ದೇವರು ಕೊಟ್ಟಿರುವ ಪಾತ್ರಗಳನ್ನು ಸೇವೆಯ ಮನೋಭಾವನೆಯೊಂದಿಗೆ ಮತ್ತು ವಿವೇಕದೊಂದಿಗೆ ತುಂಬಿಕೊಂಡಿದ್ದರು. "ಯೇಸು ಈ ಮೆಸ್ಸೀಯನ ಸೇವೆಯನ್ನು ಮುಂದುವರೆಸಿದನು, ಮತಾಂದತೆಯ ಉತ್ಸಾಹದಿಂದ ಒತ್ತಾಯ ರಾಜಕೀಯವಾದ ರಾಜ್ಯವನ್ನು ಸ್ಥಾಪಿಸುವ ಉದ್ದೇಶದಿಂದಲ್ಲ, ಆದರೆ ಆತನ ಜೊತೆಯಲ್ಲಿರುವ ಮಾನವ ಜನಾಂಗಕ್ಕಾಗಿ ಮತ್ತು ದೇವರಿಗಾಗಿ ದೀನತೆಯ ಮತ್ತು ತ್ಯಾಗಪೂರ್ಣವಾದ ಸೇವೆಯನ್ನು ಮಾಡಿದನು."[17]

**ಶಾಂತರು ಭೂಮಿಗೆ ಬಾಧ್ಯರಾಗುವರು** ಎಂದು ಯೇಸು ಹೇಳಿರುವದರ ಅರ್ಥವೇನು? ಈ ಪ್ರಶ್ನೆಗೆ ಉತ್ತರಿಸುವ ಪ್ರಯತ್ನ ಮಾಡುವ ಮೊದಲು, ಪ್ರಮುಖವಾದ ಎರಡು ನಿಜಾಂಶಗಳನ್ನು ಗಮನಿಸಲೇಬೇಕು. ಮೊದಲು "ಭೂಮಿ"ಯನ್ನು "ನೆಲ"ವೆಂದು ಸಹ ಅನುವಾದಿಸಲಾಗಿದೆ. ಎರಡನೆಯದಾಗಿ ಧನ್ಯತೆಗಳು ಎನ್ನುವ ವಾಕ್ಯವು ಕೀರ್ತನೆ 37:11ರ ಭಾಗವಾಗಿದೆ (36:11; LXX): "ಆದರೆ ದೀನರು ದೇಶವನ್ನು ಅನುಭವಿಸುವರು ಅವರು ಮಹಾ ಸೌಖ್ಯದಿಂದ ಆನಂದಿಸುವರು" (NIV). ಕೀರ್ತನೆ 37 ದುಷ್ಟನು ಮತ್ತು ನೀತಿವಂತನ ಮಧ್ಯ ಪರಸ್ಪರ ವ್ಯತ್ಯಾಸ ತೋರಿಸುತ್ತದೆ. "ವಾಗ್ದಾನ ಮಾಡಲ್ಪಟ್ಟ (ಕಾನಾನು) ದೇಶದ ಆಶೀರ್ವಾದಗಳನ್ನು ಯಾರು ಅನುಭವಿಸಿ ಸಂತೋಷಗೊಳ್ಳುವರು?" ಎಂಬ ಪ್ರಶ್ನೆಗೆ ಇದು ಉತ್ತರಿಸುತ್ತದೆ. ದುಷ್ಟನು ತನ್ನ ದುರಾಲೋಚನೆಯೊಂದಿಗೆ ಇರುವಾಗ ಅವನನ್ನು ಈ ನೆಲದಿಂದ ತೆಗೆದುಬಿಡುವನು, ಕರ್ತನಲ್ಲಿ ವಿಶ್ವಾಸವುಳ್ಳ ನೀತಿವಂತರು ಮತ್ತು ಅವರ ಸಂತತಿಯವರು ದೇಶವನ್ನು ಅನುಭವಿಸುವರು (ನೋಡಿರಿ ಯೆಶಾಯ 61:7).

ಯೇಸು ಹಿಂತಿರುಗಿ ಬರುವಾಗ ಆತನು ತನ್ನ ರಾಜ್ಯವನ್ನು ಭೂಮಿಯ ಮೇಲೆ ಸ್ಥಾಪಿಸುವನು ಎಂದು ಹೇಳುವ Premillennial ಸಿದ್ಧಾಂತಕ್ಕೆ (ಸಾವಿರ ವರ್ಷದ ಆಳ್ವಿಕೆ) ಈ ವಾಗ್ದಾನವು ಬೆಂಬಲ ನೀಡುವುದಿಲ್ಲ. ಆತನ ಭೋದನೆಗಳನ್ನು ಕೇಳಿದವರು

ಜೀವಂತವಾಗಿರುವಾಗಲೇ ಆತನ ರಾಜ್ಯವು ಬಂತು (ನೋಡಿರಿ ಮಾರ್ಕ 9:1; ಯೋಹಾನ 18:36; ಅಪೊಸ್ತಲರ ಕೃತ್ಯಗಳು 1:6-8). "ನೂತನ ಆಕಾಶಮಂಡಲ" ಮತ್ತು "ನೂತನ ಭೂಮಂಡಲವನ್ನು" ಕ್ರೈಸ್ತರು ಲೋಕಾಂತ್ಯದಲ್ಲಿ ಪಡೆಯುವದನ್ನು ಈ ಧನ್ಯತೆಯು ಸ್ವಲ್ಪಮಟ್ಟಿಗೆ ಸೂಚಿಸುತ್ತದೆಂದು ಮರಣಾಂತರ ಸಿದ್ಧಾಂತದ ರೀತಿಯಲ್ಲಿ ದೃಷ್ಟಿಸಬೇಕು (2 ಪೇತ್ರ 3:13; ಪ್ರಕಟಣೆ 21:1). ಸದ್ಯದಲ್ಲಿ ಈ ಭೂಮಿಯ ಮೇಲೆ ಕ್ರಿಸ್ತನಿಗೆ ಸೇರಿದವರಿಗೆ ದೇವರು ಒದಗಿಸುವ ಆಶೀರ್ವಾದಗಳನ್ನು ಆನಂದಿಸಲು ಮಹಾಸಾಮರ್ಥ್ಯವುಳ್ಳವರೆಂಬ ಮುಂದಿನ ಸತ್ಯವನ್ನು ಸೂಚಿಸಿ ಹೇಳಿದ್ದಾನೆ (ನೋಡಿರಿ 1 ಕೊರಿಂಥ 3:21-23). Robert H. Mounce ರವರ ಮಾತುಗಳನ್ನು ಉಪಯೋಗಿಸುವದಾದರೆ, "ಅಕ್ರಮಣಕಾರರು ಅವರ ಅನ್ಯಾಯದ ಸಂಪತ್ತನ್ನು ಸಂತೋಷಿಸಲು ಆಗುವದಿಲ್ಲ. ಕೇವಲ ದೀನರು ಮಾತ್ರ ಜೀವನದಲ್ಲಿ ಉದಾರವಾಗಿ ಪಡೆದುಕೊಂಡು ಮತ್ತು ಶಾಶ್ವತವಾಗಿ ಅದನ್ನು ಸಂತೋಷಿಸುವರು."[18] James McGill ರವರು ಈ ಕೆಳಗಿನ ವಿವರಣೆ ಬರೆದಿದ್ದಾರೆ.

> ಜನರು ನಾಗರೀಕ ಸಮಾಜದಲ್ಲಿ ಈ ಭೂಮಿಯ ಆಸ್ತಿಯ ಹಕ್ಕನ್ನು ಹೊಂದಿರುತ್ತಾರೆ ಎನ್ನುವದನ್ನು ಬಿಟ್ಟು, ಇದು ನಮ್ಮ ತಂದೆಯ ಲೋಕವಾಗಿದೆ, ಮತ್ತು ದೀನರು ಅದಕ್ಕೆ ಮಕ್ಕಳು ಮತ್ತು ಬಾಧ್ಯಸ್ತರು ಆಗಿದ್ದಾರೆ ...
>
> ನಮ್ರತೆಯುಳ್ಳವರು ಈ ಭೂಮಿಯನ್ನು ಅನುಭವಿಸುವರು, ಈ ಜೀವನದಲ್ಲಿ, ನೂರರಷ್ಟು ಆಶೀರ್ವಾದಗಳನ್ನು ಹೊಂದುವರು - ನಿಜವಾಗಿಯು ಸಮೃದ್ಧ ಜೀವಿತ - ಮತ್ತು ಮುಂದಣ ಲೋಕದಲ್ಲಿ ನಿತ್ಯಜೀವವು ದೊರೆಯುವುದು! (ಮಾರ್ಕ 10:30).[19]

## ನೀತಿಗೆ ಹಸಿದವರು ಮತ್ತು ಬಾಯಾರಿದವರು (5:6)

**6ನೀತಿಗೆ ಹಸಿದು ಬಾಯಾರಿದವರು ಧನ್ಯರು; ಅವರಿಗೆ ತೃಪ್ತಿಯಾಗುವದು.**

**ವಚನ 6. ಹಸಿವು ಮತ್ತು ನೀರಡಿಕೆ** ಮನುಷ್ಯನಿಗೆ ಸಹಜವಾಗಿ ಬಹಳ ಅವಶ್ಯವಾಗಿ ಮತ್ತು ಬಲವಾಗಿ ಪದೇ ಪದೇ ಆಗುವ ದೈಹಿಕ ಇಚ್ಛೆಯಾಗಿರುತ್ತದೆ. ಹಾಗಿದ್ದರೂ, ಇಂದಿನ ಪ್ರಪಂಚದಲ್ಲಿ ಹಸಿವು ಮತ್ತು ನೀರಡಿಕೆ ಜನಗಳಿಗೆ ಹೆಚ್ಚು ಮಟ್ಟದಲ್ಲಿ ದೂರವಾಗಿದೆ. ಆಹಾರ ಮತ್ತು ನೀರು ಶೀಘ್ರವಾಗಿ ಬೇಕಾದಂತವರಿಗೆ ಅದು ದೂರವಾಗಿದೆ. ಯೇಸು ಅಡವಿಯಲ್ಲಿ ನಲ್ವತ್ತು ದಿವಸ ಹಗಲು ಮತ್ತು ರಾತ್ರಿ ಉಪವಾಸ ಇರುವಾಗ, ಉಪವಾಸ ಏನಾಗಿದೆ ಎಂದು ಆತನಿಗೆ ತಿಳಿದಿತ್ತು (ನೋಡಿರಿ ವ್ಯಾಖ್ಯಾನ 4:2ರ ಮೇಲೆ). ಆಸಕ್ತಿಯುಳ್ಳದ್ದಾಗಿ, ಲೂಕನು ಬರೆದ ಸುವಾರ್ತೆಯಲ್ಲಿ "ಈಗ ಹಸಿದಿರುವವರಾದ ನೀವು ಧನ್ಯರು; ನಿಮಗೆ ತೃಪ್ತಿಯಾಗುವದು" ಎಂಬ ಸರಳವಾದ ಪ್ರಸಂಗವಿದೆ (ಲೂಕ 6:21). ನಿಶ್ಚಯವಾಗಿ, ಅನೇಕರು ದೇವರಿಗೆ ವಚನ ಬದ್ಧತೆಯುಳ್ಳವರಾಗಿದ್ದರಿಂದ, ಅವರಲ್ಲಿ ಜೀವನದ ಮೂಲಭೂತ ಅವಶ್ಯಕತೆಗಳನ್ನು ಹೊಂದಲಾರದೆ ಹೋಗಿದ್ದವರು ಇದ್ದರು (2 ಕೊರಿಂಥ 6:5; 11:27; ಪ್ರಕಟಣೆ 7:16).

ಮತ್ತಾಯನ ಸುವಾರ್ತೆಯಲ್ಲಿ, ನೀತಿಗೆ ಎಂಬ **ಗುಣಾತ್ಮಕ ಶಬ್ದಗಳ** ಭಾಗವನ್ನು ಉಪಯೋಗಿಸಿ ಯೇಸು ಹಸಿವು ಮತ್ತು ನೀರಡಿಕೆಯನ್ನು ಆತ್ಮೀಕ ಹಸಿವು ನೀರಡಿಕೆಯ ಆಸೆಗೆ ಅನ್ವಹಿಸಿದ್ದಾನೆ. ಇಂಥಹಾ ಅಲಂಕಾರಿಕ ಹಿನ್ನಲೆ ಇರುವಂಥದ್ದು ಕೀರ್ತನೆಯಲ್ಲಿ ನೋಡುತ್ತೇವೆ:

> **ದೇವರೇ, ಬಾಯಾರಿದ ಜಿಂಕೆಯು ನೀರಿನ ತೊರೆ**
> **ಗಳನ್ನು ಹೇಗೋ**
> **ಹಾಗೆಯೇ ನನ್ನ ಮನವು ನಿನ್ನನ್ನು ಬಯಸುತ್ತದೆ.**

> ನನ್ನ ಮನಸ್ಸು ದೇವರಿಗಾಗಿ, ಚೈತನ್ಯ ಸ್ವರೂಪನಾದ
> ದೇವರಿಗಾಗಿ ಹಾರೈಸುತ್ತದೆ;
> ನಾನು ಯಾವಾಗ ಹೋಗಿ ದೇವರ ಸನ್ನಿಧಿಯಲ್ಲಿ
> ಸೇರುವೆನೋ? (ಕೀರ್ತನೆ 42:1, 2).

> ದೇವರೆ, ನೀನೇ ನನ್ನ ದೇವರು;
> ನಾನು ನಿನ್ನ ದರ್ಶನವನ್ನು ಕುತೂಹಲದಿಂದ
> ಎದುರುನೋಡುತ್ತೇನೆ.
> ನೀರಿಲ್ಲದೆ ಒಣಗಿದ ಭೂಮಿಯಲ್ಲಿದ್ದವನು ನೀರಿ
> ಗಾಗಿಯೇ ಎಂಬಂತೆ
> ನನ್ನ ಆತ್ಮವು ನಿನಗಾಗಿ ಆತುರಗೊಳ್ಳುತ್ತದೆ;
> ಶರೀರವು ಕಂದಿಹೋಗುತ್ತದೆ (ಕೀರ್ತನೆ 63:1).

ಆತ್ಮೀಕ ಹಸಿವು ಮತ್ತು ನೀರಡಿಕೆ ಯೆಶಾಯನಲ್ಲಿಯ ಗ್ರಂಥದಲ್ಲಿಯೂ ಸಹ ಕಂಡುಕೊಳ್ಳಲಾಗಿದೆ:

> ಎಲೈ, ಬಾಯಾರಿದ ಸಕಲಜನರೇ, ನೀರಿನ ಬಳಿಗೆ ಬನ್ನಿರಿ, ಹಣವಿಲ್ಲದವನು ಸಹ ಬರಲಿ! ಬನ್ನಿರಿ, ಕೊಂಡುಕೊಳ್ಳಿರಿ, ಉಣ್ಣಿರಿ! ಬಂದು ದ್ರಾಕ್ಷಾರಸವನ್ನೂ ಹಾಲನ್ನೂ ಹಣಕೊಡದೆ ಕ್ರಯವಿಲ್ಲದೆ ತೆಗೆದುಕೊಳ್ಳಿರಿ. ಆಹಾರವಲ್ಲದ್ದಕ್ಕೆ ಹಣವನ್ನು ಏಕೆ ವ್ರಯಮಾಡುತ್ತೀರಿ? ತೃಪ್ತಿಗೊಳಿಸದ ಪದಾರ್ಥಕ್ಕೆ ನಿಮ್ಮ ದುಡಿತವನ್ನು ವೆಚ್ಚಮಾಡುವದೇಕೆ? ಕಿವಿಗೊಟ್ಟು ನನ್ನ ಮಾತನ್ನು ಕೇಳಿರಿ, ಒಳ್ಳೇದನ್ನೇ ಉಂಡು ಮೃಷ್ಟಾನ್ನದಲ್ಲಿ ಆನಂದಪಡಿರಿ (ಯೆಶಾಯ 55:1, 2).

ಯೇಸು ತನ್ನ ಆತ್ಮೀಕ ಹಸಿವನ್ನು ಈ ಭೂಮಿಯ ಮೇಲೆ ಇರುವಾಗ ಸ್ವಂತ ಜೀವಿತದ ಮುಖಾಂತರ ತೋರಿಸಿದ್ದಾನೆ. ಸೈತಾನನು ಆತನಿಗೆ ಕಲ್ಲುಗಳನ್ನು ರೊಟ್ಟಿಯಾಗಲು ಅಪ್ಪಣೆಕೊಡು ಎಂದು ಹೇಳಿದಾಗ, ಯೇಸು ಅವನಿಗೆ, “ಮನುಷ್ಯನು ರೊಟ್ಟಿತಿಂದ ಮಾತ್ರದಿಂದ ಬದುಕುವದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು” ಎಂದು ಪ್ರತ್ಯುತ್ತರ ನೀಡಿದನು (4:4). ಯಾಕೋಬನ ಬಾವಿಯ ಹತ್ತಿರ, ಯೇಸುವಿನ ಶಿಷ್ಯರು ಸುಖರೆಂಬ ಪಟ್ಟದಿಂದ ಹಿಂತಿರುಗಿ ಬಂದು ಊಟಮಾಡಲು ಭೇಡಿ ಕೊಂಡರು, ಆದರೆ ಆತನು ಊಟಮಾಡಲು ನಿರಾಕರಿಸಿದನು. “ನಿಮಗೆ ತಿಳಿಯದಂಥ ಆಹಾರವು ನನಗುಂಟು” ಮತ್ತು ನನ್ನನ್ನು ಕಳುಹಿಸದಾತನ ಚಿತ್ತದಂತೆ ಮಾಡಿ ಆತನ ಕೆಲಸವನ್ನು ಪೂರೈಸುವದೇ ನನ್ನ ಆಹಾರವು ಎಂದು ಆತನು ತನ್ನ ಶಿಷ್ಯರಿಗೆ ಹೇಳಿದನು (ಯೋಹಾನ 4:32, 34).

ಈ ಧನ್ಯತೆಯು, ಕೊನೆಪಕ್ಷ ಸ್ವಲ್ಪವಾದರು, “ನೀತಿಯು” ಅಂದರೆ ಯೇಸು ಹೇಳಿರುವ ಅರ್ಥದಲ್ಲಿ ಅದನ್ನು ವಿವರಿಸಲಾಗಿದೆ. ಯೇಸು ಉಪಯೋಗಿಸಿದ ಪದವು “ನ್ಯಾಯಕರವಾದದ್ದು,” “ನೀತಿಯ ಪ್ರಮಾಣಿಕತೆ” ಅಥವಾ “ದೇವರ ಜೊತೆಯಲ್ಲಿ ಸರಿಯಾಗಿ ನಿಲ್ಲುವದು” ಎಂದು ಅರ್ಥಮಾಡಿಕೊಳ್ಳಬೇಕು. ನ್ಯಾಯಕ್ಕೆ ಸಂಬಂಧಪಟ್ಟಂತೆ, ದೇವರಿಂದ ಸ್ಥಾಪಿಸಲ್ಪಡುವ ರಾಜ್ಯದಲ್ಲಿನ ನ್ಯಾಯಕ್ಕಾಗಿ ಹಸಿದವರು ಮತ್ತು ನಿರಾಡಿಕೆಯುಳ್ಳ ದರಿದ್ರರಿಗೆ ಮತ್ತು ತುಳಿಯಲ್ಪಟ್ಟವರಿಗೆ ಧನ್ಯತೆಯು ಪ್ರೋತ್ಸಾಹ ನೀಡುತ್ತದೆ ಎಂದು Donald A. Hagner ಹೇಳಿದ್ದಾರೆ.[20] ನೀತಿಯೆಂಬುದು ನೈತಿಕ ಪ್ರಮಾಣಿಕತೆಯಲ್ಲಿ ಸರಿಯಾಗಿರುವದಕ್ಕೆ ಸಂಬಂಧಪಟ್ಟಿದ್ದೆಂದು Leon Morris ಹೇಳಿದರು. “ಪ್ರತಿಯೊಬ್ಬರು ಆಗಾಗ್ಗೆ ಸರಿಯಾಗಿರುವದನ್ನೆ ಮಾಡುತ್ತಾರೆ, ಆದರೆ ಆಗಾಗ್ಗೆ ಮಾಡುವ ಕಾರ್ಯಗಳ ಕುರಿತು ಅಲ್ಲದೆ

ಸರಿಯಾದದ್ದನ್ನು ಮಾಡುವುದಕ್ಕೆ ಯಾವಾಗಲು ಉದ್ವೇಗದಿಂದ ಆಸಕ್ತಿವಹಿಸಬೇಕೆಂದು ಯೇಸು ಸೂಚಿಸಿದರೆಂದು" Morris ಬರೆದಿದ್ದಾರೆ.[21] ಇಲ್ಲಿಯವರೆಗೂ ಎಲ್ಲಾ ದೇವ ಜನರು ಅಪೂರ್ಣರು ಮತ್ತು ಪಾಪ ಹೊಂದಿದವರು, ಅವರೆಲ್ಲರೂ ಸರಿಯಾಗಿ ದೇವರೊಂದಿಗೆ ನಿಲ್ಲಲು ಮತ್ತು ಆತನೊಂದಿಗೆ ನೀತಿವಂತರಾಗಲು ದೇವರ ಕೃಪೆಯ ಮೇಲೆ ಆತುಕೊಳ್ಳಬೇಕು.

ಯೇಸುವಿನ ಶಿಷ್ಯರು ವಿಶಾಲವಾದ ಸಂಪೂರ್ಣತೆ ಹೊಂದಿರುವ ನೀತಿಯನ್ನು ಆಸೆಪಡುವವರಾಗಿರಬೇಕೆಂಬುದನ್ನು ಗ್ರೀಕ್ ಭಾಷೆಯಲ್ಲಿರುವ ಈ ವಚನದ ರಚನೆಯು ಹೇಳುತ್ತದೆ. ನೀತಿಯತೆ ಎಂದರೆ ದೇವರ ಮುಂದೆ ಸರಿಯಾದ ರೀತಿಯಲ್ಲಿ ಜೀವಿಸುವದು. ಇದು ಆತ್ಮೀಕ ಜೀವಿತಕ್ಕೆ ಒಂದು ಆಯ್ಕೆಯ ವಿಷಯವಲ್ಲ ಆದರೆ ಆತ್ಮೀಯ ಜೀವಿತಕ್ಕೆ ಅವಶ್ಯಕವಾಗಿದೆ. ಕ್ರಿಸ್ತನ ಶಿಷ್ಯರಲ್ಲಿ ಯಾರೋಬ್ಬರು ಅದನ್ನು ಹುಡುಕುವುದರಲ್ಲಿ ಯಾವುದೇ ನೆಪ ಹೇಳುವವನಾಗಿರಬಾರದು. ಅದರ ಪ್ರತಿ ಭಾಗವನ್ನು ಆತುರತೆಯಿಂದ ಆಶೀಸುವವರಾಗಿರಬೇಕು.[22]

ಯಾರು ದೇವರನ್ನು ಅತ್ಯಾಶೆಯುಳ್ಳವರಾಗಿ ಹುಡುಕುವರೋ ಅವರನ್ನು ದೇವರು ತೃಪ್ತಿಗೊಳಿಸುತ್ತಾನೆ ಎಂದು ವಾಗ್ದಾನವಿದೆ. ಅವರ ಹೃದಯದ ಆಸೆಗಳನ್ನು ದೇವರು ನೆರವೇರಿಸುತ್ತೇನೆಂದು ವಾಗ್ದಾನ ಮಾಡಿದ್ದಾನೆ. ಇಲ್ಲಿರುವ ಭಾಷೆಯು ಕೀರ್ತನೆ 107:9ನ್ನು ನೆನಪಿಸುವಂತದ್ದಾಗಿದೆ: "ಬಾಯಾರಿಕೆಯ ಆತ್ಮವನ್ನು ತೃಪ್ತಿಪಡಿಸುವನು, ಮತ್ತು ಹಸಿದಿರುವ ಆತ್ಮಕ್ಕೆ ಆತನು ಉತ್ತಮವಾದ್ದದರಿಂದ ತುಂಬಿಸುವನು" (ನೋಡಿರಿ ಯೆರೆಮೀಯ 31:25; ಲೂಕ 1:53). ದೇವರು ತನ್ನ ಜನರು ಆಸೆಯಿಂದ ಇರುವಂಥವರಿಗೆ ದೈಹೀಕವಾಗಿ ಮತ್ತು ಆತ್ಮೀಕವಾಗಿ ತೃಪ್ತಿಪಡಿಸಲು ಸಾಮರ್ಥ್ಯವುಳ್ಳವನಾಗಿದ್ದಾನೆ. ಸ್ಪಷ್ಟವಾಗಿ, ಆತ್ಮೀಕ ತೃಪ್ತಿಯು ಇಂದಿನ ದಿನಗಳಲ್ಲಿಯು ಸಹ ಆಗುವಂತದ್ದಾಗಿದೆ. "ಜೀವಕೊಡುವ ರೊಟ್ಟಿ ನಾನೇ; ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ, ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ" ಎಂದು ಯೇಸು ಹೇಳಿದನು (ಯೋಹಾನ 6:35). ಇನ್ನೂ, ಈ ಆತ್ಮಿಕ ಜೀವನ ತುಂಬಿಸುವದು ಮುಂದಿನ ದಿನಗಳಲ್ಲಿಯೂ ಸಹ ನೆರವೇರುವಂತದ್ದಾಗಿದೆ, ಮತ್ತು ಈ ನೆರವೇರುವಿಕೆಯು ಶ್ರೇಷ್ಟವಾದ ಮದುವೆ ಊಟಕ್ಕೂ ಅಥವಾ ಅತೀತಿ ಸತ್ಕಾರಕ್ಕೂ ಹೋಲಿಸಿ ಅದು ಈ ರೀತಿಯಲ್ಲಿ ನೆರವೇರುವದು ಎಂದು ವರ್ಣಿಸಿದ್ದಾನೆ (8:11, 12; 22:1-10; 25:10; ಪ್ರಕಟಣೆ 19:9). ಪರಲೋಕ ಪಟ್ಟಣದಲ್ಲಿ, ದಾಹವುಳ್ಳವನಿಗೆ ಜೀವಜಲದ ಬುಗ್ಗೆಯಿಂದ ಕ್ರಯವಿಲ್ಲದೆ ಕುಡಿಯುವದಕ್ಕೆ ಕೊಡಲ್ಪಡುವದು (ಪ್ರಕಟಣೆ 21:6; 22:17).

## ಕರುಣೆಯುಳ್ಳವರು (5:7)

**[7]ಕರುಣೆಯುಳ್ಳವರು ಧನ್ಯರು; ಅವರು ಕರುಣೆಹೊಂದುವರು.**

**ವಚನ 7.** ಗ್ರೀಕ್ ಪದದಿಂದ ಬಂದಿರುವ **ಕರುಣೆಯುಳ್ಳವರು** ಎನ್ನುವದು "ಸಹಾನುಭೂತಿ" ಎಂದು ಸಹ ಅನುವಾದಿಸಬಹುದು. ಅದಕ್ಕೆ ಸಂಬಂಧಪಟ್ಟಿರುವ ಪದ "ದಯೆ" ಎಂದು ಅನುವಾದಿಸಲಾಗಿದೆ. ಅದು ಸಹಾನುಭೂತಿ ಹೊಂದಿ ಮತ್ತು ಕಾರ್ಯರೂಪದಲ್ಲಿ ಇನ್ನೊಬ್ಬ ವ್ಯಕ್ತಿಯ ಕಡೆಗೆ ಕರುಣೆ ತೋರಿಸುವಂತದ್ದಾಗಿದೆ. ಒಬ್ಬನು ಇನ್ನೊಬ್ಬನ ಮೇಲೆ ಕರುಣೆ ಹೊಂದಿದಲ್ಲಿ ಶ್ರೇಷ್ಟವಾದದ್ದನ್ನು ಬಯಸಿ ಉಚಿತವಾಗಿ ಮಾಡಲು ಆಸಕ್ತಿಯುಳ್ಳವನಾಗಿದ್ದಾನೆ. ಈ ಪದವು ಇನ್ನೊಬ್ಬನ ವಿಷಯದಲ್ಲಿ ದುಃಖ ಅನುಭವಿಸುವದಕ್ಕಿಂತ ಬೇರೆಯಾದದ್ದಾಗಿದೆ; ಆ ವ್ಯಕ್ತಿಗೆ ಸಹಾಯ ಮಾಡಲು ಉತ್ತಮವಾದ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ಇದು "ಅನುಭೂತಿಯೇ ಹೊರತು ಸಹಾನುಭೂತಿಯಾಗುವುದಿಲ್ಲ," ಇದು ಕೇವಲ ಇನ್ನೊಬ್ಬರನ್ನು ನೋಡಿ ಅನುಕಂಪ ತೋರಿಸುವಂಥದ್ದಾಗಿದೆ.

ಕರುಣೆಯ ಕುರಿತು ಯೇಸು ಬೋಧಿಸಿದ ಉಪದೇಶವು ಹೊಸ ಒಡಂಬಡಿಕೆಯ

ಕಾಲದಲ್ಲಿದ್ದ ಜೀವಿತ ವಿಧಾನಕ್ಕೆ ವಿರುದ್ಧವಾದದ್ದಾಗಿತ್ತು. ರೋಮನ್ನರು ಸಹಾನುಭೂತಿ ತೋರಿಸುವದನ್ನು ಅಸಹ್ಯಿಸಿದರು ಮತ್ತು ಅದನ್ನು ಆತ್ಮದ ಒಂದು ರೋಗವೆಂದು ಅವಲೋಕಿಸಿದ್ದಕ್ಕಾಗಿ ಪ್ರಸಿದ್ಧಿಯಾದರು. ಅವರು ಕರುಣೆಯನ್ನು ಬಲಹೀನತೆಯೆಂದು ತಿಳಿದುಕೊಂಡಿದ್ದರು, ಮತ್ತು ಇದನ್ನು ಎಲ್ಲಾ ಮನುಷ್ಯರ ಮೇಲೆ ಹಾಕಿ ಹಿನ್ನೈಸಿ ದೌರ್ಬಲ್ಯವೆಂದುಕೊಂಡರು. ಅವರು ಪುರುಷತ್ವವನ್ನು ಪ್ರಖ್ಯಾತಿಗೊಳಿಸಿದರು, ಮತ್ತು ಕರುಣೆ ಪ್ರದರ್ಶಿಸುವವರನ್ನು ಪುರುಷತ್ವದ ಕೊರತೆಯುಳ್ಳವರನ್ನಾಗಿ ಪರಿಗಣಿಸಿದರು.[23]

ಯೇಸುವಿನ ಕಾಲದ ಯೆಹೂದ್ಯ ನಾಯಕರು ಕರುಣೆಯನ್ನು ಶೂನ್ಯ ಮಾಡಿದರು. ಅವರು ಸ್ವನೀತಿಯುಳ್ಳವರು, ಅಹಂಕಾರವುಳ್ಳವರು, ಗರ್ವ, ಮತ್ತು ನ್ಯಾಯ ತೀರ್ಪುಮಾಡುವವರಾಗಿದ್ದರು. ವೇದಶಾಸ್ತ್ರದ ಪ್ರತಿಯೊಂದು ಪ್ರಶ್ನೆಗೆ ನಮ್ಮಲ್ಲಿ ಉತ್ತರವಿದೆ ಎಂದು ಅವರು ತಿಳಿದುಕೊಂಡಿದ್ದರು, ಆದರೆ ಸಂಕಷ್ಟದಲ್ಲಿರುವವರ ಮೇಲೆ ಕರುಣೆ ಇರಲಿಲ್ಲ. ಸಂಕಷ್ಟಗಳು ಅವರ ಪಾಪಕ್ಕೆ ದೇವರು ಕೊಟ್ಟಿರುವ ಶಿಕ್ಷೆ ಎಂದು ಅವಲೋಕಿಸಿದರು (ನೋಡಿರಿ ಲೂಕ 13:1-5; ಯೋಹಾನ 9:1, 13, 34). "ಯಾವನಾದರೂ ಒಬ್ಬನಿಗೆ ಕರುಣೆ ತೋರಿಸಿದರೆ ಪರಲೋಕದಿಂದ ಅವನಿಗೆ ಕರುಣೆ ತೋರಿಸಲಾಗುವದು; ಅವನು ಇನೊಬ್ಬನಿಗೆ ಕರುಣೆ ತೋರದೆ ಹೋದರೆ ಪರಲೋಕದಿಂದ ಅವನಿಗೂ ಸಹ ಕರುಣೆ ತೋರುವುದಿಲ್ಲ" ಎಂದು ಪೌಲನ ಬೋಧಕನಾದ ಗಮಾಲಿಯೇಲ್‌ನು Talmud ನಿಂದ ಉಲ್ಲೇಖಿಸಿ ಹೇಳಿದ್ದಾನೆ.[24] ಆತನ ಕಾಲದಲ್ಲಿ ಅನೇಕರಂತೆ ಅಲ್ಲದೆ ಕರುಣೆ ಕುರಿತು ಸರಿಯಾದ ಅವಲೋಕನ ಹೊಂದಿದ್ದನು.

ದೇವರ (ವಿಮೋಚನಕಾಂಡ 34:6; ಲೂಕ 6:36) ಮತ್ತು ಕ್ರಿಸ್ತನ ಒಂದು ಶ್ರೇಷ್ಟವಾದ ಗುಣಲಕ್ಷಣಗಳಲ್ಲಿ ಕರುಣೆಯು ಸಹ ಒಂದು ಗುಣವಾಗಿದೆ (ಇಬ್ರಿಯ 2:17). ಕರುಣೆಯನ್ನು "ಧರ್ಮಶಾಸ್ತ್ರದಲ್ಲಿ ಶ್ರೇಷ್ಟವಾದ ವಿಷಯವೆಂದು" ಯೇಸು ಗುರುತಿಸಿದ್ದಾನೆ (23:23; ನೋಡಿರಿ 9:13; 12:7). ಯೇಸು ಹೇಳಿದ ಧನ್ಯತೆ ಜ್ಞಾನೋಕ್ತಿ 14:21ರಲ್ಲಿ ಬರೆದಿರುವದನ್ನು ಪ್ರತಿಬಿಂಬಿಸುತ್ತದೆ: "ದರಿದ್ರನನ್ನು ಕನಿಕರಿಸುವವನು ಧನ್ಯನು" (LXX). ಕರುಣೆಯ ಶೀರ್ಷಿಕೆಯಲ್ಲಿ "ಕರುಣೆಗೆ" ಪ್ರತ್ಯೇಕವಾದ ಪದಗಳನ್ನು ಉಪಯೋಗಿಸದಿದ್ದರೂ ಸಹ ಮತ್ತಾಯನ ಸುವಾರ್ತೆಯಲ್ಲಿ ಎಲ್ಲಾ ಕಡೆ ವ್ಯಾಪಿಸಿದೆ. Robert H. Gundry ಈ ಪಟ್ಟಿಯನ್ನು ಸಂಯೋಜಿಸಿದ್ದಾರೆ:

> ಮರಿಯಳಿಗೆ ಬೈಲಿಗೆ ತಂದು ಅವಮಾನಪಡಿಸುವದು ಯೋಸೇಫನಿಗೆ ಬೇಕಾಗಿರಲಿಲ್ಲ ಆತನು ಕರುಣೆ ತೋರಿಸಿದನು (1:19); ಗಂಡನು ಹೆಂಡತಿಗೆ ವಿಚ್ಛೇದನ ಮಾಡದೆ ಇರುವದರ ಮೂಲಕ ಕರುಣೆ ತೋರಿಸಬೇಕು (5:31-32 ...); ಸಾಲಗಾರರನ್ನು ಕ್ಷಮಿಸಿ ಕರುಣೆ ತೋರಿಸಿರುವ ಸಾಮ್ಯ ಕರುಣೆ ಕುರಿತು ವರ್ಣಿಸಲಾಗಿದೆ (18:23-35); ಕೇವಲ ಒಂದು ಘಂಟೆ ಮಾತ್ರ ಕೆಲಸಮಾಡಿದ ಆಳುಗಳಿಗೆ ಒಂದು ದಿನದ ಕೂಲಿ ಕೊಡುವದರ ಮುಖಾಂತರ ಕರುಣೆಯ ಕಾರ್ಯತೋರಿಸುತ್ತದೆ (20:1-16); "ಯೇಸುವಿನ ದೃಷ್ಟಿ ಚಿಕ್ಕ ಮಕ್ಕಳ ಮೇಲೆ" (ಅಧ್ಯಾಯ 18), ಮಕ್ಕಳ ಕಡೆ, ಕುರುಡರು, ಮತ್ತು ಮಂದಿರದಲ್ಲಿ ಕುಂಟರು (21:14-16), ಮತ್ತು ಭ್ರಷ್ಟರೂ ಮತ್ತು ಸೂಳೆಯರಿಗೆ (21:28-32) ಯೇಸು ಕರುಣೆಯನ್ನು ತೋರಿಸಿದನು; ಮತ್ತು ಕೊನೆಯ ನ್ಯಾಯತೀರ್ಪಿನಲ್ಲಿ ಆಡುಗಳಿಂದ ಕುರಿಗಳನ್ನು ಬೇರ್ಪಡಿಸಿ ಕರುಣೆ ತೋರಿಸುವದು (25:31-46).[25]

ಇತರರಿಗೆ ಕರುಣೆ ತೋರಿಸುವವರು **ಕರುಣೆಯುಳ್ಳವರು** ಎಂದು ಯೇಸು ಹೇಳಿದನು. "ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆ ಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವುದಿಲ್ಲ" ಎಂದು ತರುವಾಯ ಆತನು ಅವರಿಗೆ ಬೋಧಿಸಿದನು (6:15). ನಾವು ಇತರರಿಗೆ ಕರುಣೆ ತೋರಿಸದಿದ್ದರೆ, ನಮ್ಮ ಕ್ಷಮಾಪಣೆಗೆ ನಾವೆ ಅಡ್ಡಿಯಾಗುತ್ತೇವೆ. "ಕರುಣೆ

ತೋರಿಸದೆ ಇರುವವನಿಗೆ ನ್ಯಾಯಾತೀರ್ಮಾನದಲ್ಲಿ ಕರುಣೆಯು ತೋರಿಸಲ್ಪಡುವುದಿಲ್ಲ. ಕರುಣೆಯು ನ್ಯಾಯತೀರ್ಮಾನವನ್ನು ಗೆದ್ದು ಹೀಗ್ಗುತ್ತದೆ" ಎಂದು ಯಾಕೋಬನು ಬರೆದಿದ್ದಾರೆ (ಯಾಕೋಬ 2:13). ದೇವರಿಗೆ ನಮ್ಮ ಕಡೆಯಿರುವ ಪ್ರೀತಿ ಮತ್ತು ಕರುಣೆಯಿಂದ ನಮ್ಮ ಪಾಪಗಳನ್ನು ಕ್ಷಮಿಸಲು ದೇವರು ಇಚ್ಛೆಯಿಸಿದ್ದಾನೆ. ಆತನ ಕೃಪೆಯಿಂದಲೆ ಕರುಣೆ ಬರುತ್ತದೆ; ಮತ್ತು ಇವೆರಡು ಆತನ ಪ್ರೀತಿಯನ್ನು ವ್ಯಕ್ತಪಡಿಸುತ್ತವೆ. ಆತನ ಕರುಣೆಯಿಂದ ದೇವರು ನಮಗೆ ಕೊಡಬೇಕಾಗಿರುವ ಶಿಕ್ಷೆಯನ್ನು ಆತನು ಕೊಡಲಿಲ್ಲ; ಆದರೆ ಆತನ ಕೃಪೆಯಿಂದಲೇ, ಆತನು ಕ್ಷಮಾಪಣೆಗೆ ಯೋಗ್ಯರಲ್ಲದ ನಮ್ಮನ್ನು ತನ್ನ ಕೃಪೆಯಿಂದಲೆ ನಮ್ಮನ್ನು ಕ್ಷಮಿಸಿದ್ದಾನೆ. "ಕರುಣೆಯು ಈ ಲಕ್ಷಣದೊಂದಿಗೆ ವ್ಯವಹರಿಸುತ್ತದೆ, ಕೃಪೆಯು ಕಾರಣದೊಂದಿಗೆ ವ್ಯವಹರಿಸುತ್ತದೆ. ಕರುಣೆಯು ಶಿಕ್ಷೆಯಿಂದ ಬಿಡುಗಡೆ ಮಾಡುತ್ತದೆ; ಕೃಪೆಯು ದುಷ್ಟನನ್ನು ಕ್ಷಮಿಸುತ್ತದೆ. ಕರುಣೆಯು ನೋವನ್ನು ತೆಗೆದುಹಾಕುತ್ತದೆ; ಕೃಪೆಯು ರೋಗವನ್ನು ಗುಣಪಡಿಸುತ್ತದೆ."[26] "ಕೃಪೆಯು ನಮ್ಮ ಪಾಪಗಳಿಗೆ ದೇವರ ಪ್ರತಿಕ್ರಿಯೆಯಾಗಿದೆ; ಕರುಣೆ ನಮ್ಮ ದುಃಖಾವಸ್ಥೆಗೆ ಆತನ ಪ್ರತಿಕ್ರಿಯೆಯಾಗಿದೆ."[27] Haddon W. Robinson ರವರು ಬರೆಯುವಾಗ ಆತನು ಸರಿಯಾಗಿಯೇ ಬರೆದಿದ್ದಾನೆ.

## ನಿರ್ಮಲ ಚಿತ್ತರು (5:8)

**[8]ನಿರ್ಮಲಚಿತ್ತರು ಧನ್ಯರು; ಅವರು ದೇವರನ್ನು ನೋಡುವರು.**

**ವಚನ 8. ಶುದ್ಧತೆ** ಎಂದು ಅರ್ಥಕೊಡುವ ಗ್ರೀಕ್ ಶಬ್ದವು ಇದು ಹೊಸ ಒಡಂಬಡಿಕೆಯಲ್ಲಿ ಇಪ್ಪತ್ತೇಳು ಸಾರಿ ಕಾಣಿಸುತ್ತದೆ. ಸಾಮಾನ್ಯವಾಗಿ ಈ ಪದವನ್ನು NASB ಸತ್ಯವೇದದಲ್ಲಿ "ಶುದ್ಧ" ಅಥವಾ "ಸ್ವಚ್ಛ" ಎಂದು ಅನುವಾದಿಸಲಾಗಿದೆ. ಹೃದಯ ಎನ್ನುವ ಪದವು ಒಬ್ಬನ ಅಂತರಾಳದ ಅನಿಸಿಕೆಗಳು, ಆಲೋಚನೆ, ಮತ್ತು ಚಿತ್ತ ಒಳಗೊಂಡಿರುವ ಮುಖ್ಯ ಕೇಂದ್ರವನ್ನು ಸೂಚಿಸುತ್ತದೆ. ಶಾಸ್ತ್ರಿಗಳು ಮತ್ತು ಫರಿಸಾಯರು ಆಚರಿಸುವ ಹೊರಗಿನ ತೋರಿಕೆಯ ಆಚರಣೆಗಳಿಗೆ ಭಿನ್ನವಾಗಿ ಈ ಧನ್ಯತೆಯು ಕ್ರಿಸ್ತನನ್ನು ಹಿಂಬಾಲಿಸುವವರ ಅಂತರಾಳದ ಶುದ್ಧತೆಯ ಕುರಿತು ಮಾತಾಡುತ್ತದೆ (ನೋಡಿರಿ 15:1-11; 23:25-28). ಶುದ್ಧ ಹೃದಯವು ಸರಿಯಾಗಿ ಜೀವಿಸಲು ಒಂದು ಸಂಪನ್ಮೂಲ ಮತ್ತು ಪ್ರಥಮ ಆಧ್ಯತೆ ಆಗಿದೆ. ಇದನ್ನೇ ಹೊರತುಪಡಿಸಿ, ಉಳಿದೆಲ್ಲ ಉತ್ತಮ ಕಾರ್ಯಗಳು ಅರ್ಥವಿಲ್ಲದ ಆಚರಣೆಗಳಾಗಿವೆ (ನೋಡಿರಿ 12:34; 15:19). Michael J. Wilkins ರವರು ಅದರ ಅವಶ್ಯಕತೆಯನ್ನು ಸಂಗ್ರಹಿಸಿ ಹೀಗೆ ಹೇಳಿದ್ದಾರೆ:

> ಸಂಸ್ಕಾರ ಸಂಬಂಧವಾದ ಶುದ್ಧೀಕರಣವನ್ನು ಕಾಪಾಡಲು ರಬ್ಬಿಗಳು ನಿಯಮಗಳ ಸಂಯೋಜನೆಯನ್ನು ಅಭಿವೃದ್ಧಿ ಮಾಡುತ್ತಿದ್ದರು, ನಂತರ ಇದರಲ್ಲಿ *Tohoroth* ("ಸ್ವಚ್ಛತೆ") ಒಳಗೊಂಡಿರುತ್ತದೆ, ಇದು Mishnahದ ಒಂದು ಭಾಗವಾಗಿದೆ. ಎಲ್ಲಾ ಶುದ್ಧಿಗಳಿಗಿಂತಾ ಅತಿ ಪ್ರಾಮುಖ್ಯವಾದ ಹೃದಯ ಶುದ್ಧತೆಯನ್ನು ಆ ಎಲ್ಲಾ ನಿಯಮಗಳು ಹಾದು ಹೋಗುತ್ತವೆ. ಶುದ್ಧ ಹೃದಯವು ಅದು ಹೊರಗಡೆಯ ಶುದ್ಧತೆ ಉತ್ಪಾದಿಸುತ್ತದೆ, ಆದರೆ ಪ್ರತಿಕ್ರಮದಲಲ್ಲ ... ಒಂದೇ ಮನಸ್ಸಿನಿಂದ ದೇವರಿಗೆ ದೀನಭಾವನೆಯಿಂದ ಜೀವಿಸುವವರು ಜೀವನದ ಎಲ್ಲಾ ಕ್ಷೇತ್ರದಲ್ಲಿ ಪರಿಣಾಮ ಬೀರುವ ಹೃದಯ ಶುದ್ಧಿಯ ವ್ಯಕ್ತಿಯನ್ನು ವರ್ಣಿಸುತ್ತದೆ.[28]

ಯೇಸುವಿನ ಧನ್ಯತೆ ಕೀರ್ತನೆಯಲ್ಲಿ ವರ್ಣಿಸಿದ ಆರಾಧನೆಗೆ ಮಾರ್ಗವನ್ನು ಪ್ರತಿಧ್ವನಿಸುತ್ತದೆ:

> ಯೆಹೋವನ ಪರ್ವತವನ್ನು ಹತ್ತತಕ್ಕವನು ಯಾರು? ಆತನ ಪವಿತ್ರಸ್ಥಾನದಲ್ಲಿ ನಿಲ್ಲುವದಕ್ಕೆ ಎಂಥವನು ಯೋಗ್ಯನು? ಯಾವನು ಅಯೋಗ್ಯಕಾರ್ಯಗಳಲ್ಲಿ ಮನಸ್ಸಿಡದೆ ಮೋಸ ಪ್ರಮಾಣಮಾಡದೆ ಶುದ್ಧಹಸ್ತವೂ ನಿರ್ಮಲ ಮನಸ್ಸೂ ಉಳ್ಳವನಾಗಿದ್ದಾನೋ (ಕೀರ್ತನೆ 24:3, 4).

ಕೀರ್ತನೆಗಾರನು ಸಹ ಪ್ರಾರ್ಥಿಸಿದ್ದಾನೆ,

> ದೇವರೇ, ನನ್ನಲ್ಲಿ ಶುದ್ಧಹೃದಯವನ್ನು ನಿರ್ಮಿಸು; ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನಪಡಿಸು. ನಿನ್ನ ಸನ್ನಿಧಿಯಿಂದ ನನ್ನನ್ನು ತಳ್ಳಬೇಡ; ನಿನ್ನ ಪರಿಶುದ್ಧಾತ್ಮವನ್ನು ನನ್ನಿಂದ ತೆಗೆಯಬೇಡ (ಕೀರ್ತನೆ 51:10, 11).

"ಹೃದಯದಲ್ಲಿ ಶುದ್ಧತೆ" **ಹೊಂದಿದವರು ಮಾತ್ರ ದೇವರನ್ನು ನೋಡುವರು.** ಈ ಒಂದು ಸನ್ನಿವೇಶದಲ್ಲಿ ಕ್ರಿಯಾಪದ "ನೋಡು" ಎನ್ನುವುದು ಕಣ್ಣಿನಿಂದ ನೋಡುವದಕ್ಕಿಂತ ಆಚೆಯ ನೋಟವನ್ನು ಸೂಚಿಸುತ್ತದೆ. ನೋಡುವದು ಅಂದರೆ ಸಂತೋಷವನ್ನು ಅನುಭವಿಸುವದು ಮತ್ತು ದೇವರನ್ನು ತಿಳಿದುಕೊಳ್ಳುವದು ಎಂದು ಅರ್ಥ. ಯಾರು ದೇವರನ್ನು ನೋಡಿಲ್ಲ ಇದು ಸತ್ಯ (ವಿಮೋಚನಕಾಂಡ 33:20; ಯೋಹಾನ 1:18; 1 ತಿಮೋಥೆ 6:16). ಆದರೂ, ಕ್ರೈಸ್ತರು ಆತನನ್ನು ದೈಹಿಕ ಕಣ್ಣುಗಳಿಂದ ನೋಡದೆ ಇದ್ದರೂ, ನಂಬಿಕೆಯೆಂಬ ಕಣ್ಣುಗಳ ಮುಖಾಂತರ ದೇವರು ಈಗಲೂ ಇದ್ದಾನೆ ಎಂಬ ಅನುಭವ ಹೊಂದುತ್ತಾರೆ (ಕೀರ್ತನೆ 63:2; ಇಬ್ರಿಯ 11:27). ಆದಾಗ್ಯೂ, ಒಂದು ದಿನ ಆ ನಂಬಿಕೆಯೇ ನಿಜರೂಪದಲ್ಲಿ ಬದಲಾಗುತ್ತದೆ (ನೋಡಿರಿ 2 ಕೊರಿಂಥ 5:7), ಮತ್ತು ಕ್ರೈಸ್ತರು "ಮುಖಾಮುಖಿ"ಯಾಗಿ ಆತನನ್ನು ನೋಡುವರು (1 ಕೊರಿಂಥ 13:12; ನೋಡಿರಿ 1 ಯೋಹಾನ 3:2). ಪರಲೋಕ ಪಟ್ಟಣದಲ್ಲಿ, ದೇವರು ಮನುಷ್ಯರಲ್ಲಿ ವಾಸಮಾಡುವನು (ಪ್ರಕಟಣೆ 21:3) ಮತ್ತು "ಅವರು ಆತನ ಮುಖದರ್ಶನ ಹೊಂದುವರು" (ಪ್ರಕಟಣೆ 22:4).

## ಸಮಾಧಾನ ಪಡಿಸುವವರು (5:9)

**9ಸಮಾಧಾನ ಪಡಿಸುವವರು ಧನ್ಯರು; ಅವರು ದೇವರ ಮಕ್ಕಳು ಅನಿಸಿಕೊಳ್ಳುವರು.**

**ವಚನ 9. ಸಮಾಧಾನ ಪಡಿಸುವವರು** ಎಂಬ ಶಬ್ದಕ್ಕೆ ಹಿಂದೆಯಿರುವ ಗ್ರೀಕ್ ಪದವು ಹೊಸ ಒಡಂಬಡಿಕೆಯೆಲೆಲ್ಲಾ ಮಾತ್ರ ಕಾಣಿಸುತ್ತದೆ. ಈ ಪದವು "ವಿರುದ್ಧವಾಗಿ ಗೊಣಗುಟ್ಟುವವರು, ಪರರ ಕೆಲಸದಲ್ಲಿ ಕೈಹಾಕುವವರು, ಹರಟೆ ಹೊಡೆಯುವವರು, ಪರಿಹಾಸ್ಯ ಮಾಡುವವರು" ಮತ್ತು ಕಿರುಕುಳ ಕೊಡುವವರು ಎಂದು Lewis ಹೇಳಿದ್ದಾನೆ.[29]

"ಸಮಾಧಾನ" ಎನ್ನುವ ಗ್ರೀಕ್ ಪದದ ಅನುರೂಪದ ಶಬ್ದಗಳನ್ನು ಹೊಸ ಒಡಂಬಡಿಕೆಯಲ್ಲಿ ತೊಂಬತ್ತು ಸಾರಿಗಿಂತಲೂ ಹೆಚ್ಚಾಗಿ ಉಪಯೋಗಿಸಿದ್ದಾರೆ ಮತ್ತು ಎಲ್ಲಾ ಪುಸ್ತಕಗಳಲ್ಲಿ ಇದು ಕಾಣಿಸುತ್ತದೆ. "ಸಮಾಧಾನ"ಕ್ಕೆ ಸಮನಾರ್ಥ ಕೊಡುವ ಇಬ್ರಿಯಾ ಭಾಷೆಯ ಎಂಬ ಶಬ್ದ ಹೋರಾಟಕ್ಕೆ ಹೋಗದಿರುವದು; ಇತರರ ವಿಷಯದಲ್ಲಿ ಒಳ್ಳೆಯ ಮನೋಭಾವನೆ ಹೊಂದಿರುವದು ಎಂದು ಅರ್ಥಕೊಡುತ್ತದೆ. ಪರಿಣಾಮಕಾರಿಯಾದ ಅದರ ಸಂಸ್ಕೃತಿಯ ಸನ್ನಿವೇಶದಲ್ಲಿಯೇ ಶಬ್ದಗಳನ್ನು Hare ಸಂಯೋಜಿಸಿದ್ದಾನೆ:

> ಈ ಧನ್ಯತೆಯು ಮೊದಲನೆಯ ಸಾರಿಗೆ ಫ್ಯಾಕ್ಸ್ ರೋಮಾನ [Roman Peace] ಕಾಲದಲ್ಲಿ ನುಡಿದರು ಎಂಬುದು ಗಮನಾರ್ಹವಾದದ್ದು. ಸೈನಿಕ ಔನ್ನತ್ಯದಿಂದ

> ರೋಮನ್ನರು ಚಿಕ್ಕಚಿಕ್ಕ ಯುದ್ಧಗಳನ್ನು ಮುಕ್ತಾಯ ಮಾಡಿದರು. ಮೆಡಿಟರೋನಿಯನ್ ಕಡಲ್ಗಳ್ಳತನ ತಡೆಹಿಡಿಯಲಾಗಿತ್ತು ಮತ್ತು ಆ ನೆಲದಲ್ಲಿ ದಾರಿಯಲ್ಲಿ ದರೋಡೆ ಮಾಡುವದು ಬಹಳಷ್ಟು ಮಟ್ಟಿಗೆ ಕಡಿಮೆಯಾಯಿತು. ಚಕ್ರವರ್ತಿಗಳ ಸರಿಹದ್ದನ್ನು ಬಿಟ್ಟರೆ ಉಳಿದೆಲ್ಲಾ ಸ್ಥಳಗಳಲ್ಲಿ ಯುದ್ಧಗಳು ಇರಲಿಲ್ಲ. ಆದರೆ ಇಬ್ರಿಯರಲ್ಲಿ ಸಮಾಧಾನ ಎನ್ನುವ ಪ್ರಜ್ಞೆ *shalom,* ಇದು ಎಲ್ಲರ ಒಳಿತಿಗಾಗಿ ಸಾಮರಸವನ್ನುಂಟು ಮಾಡುವದಾಗಿತ್ತು, ಈ ಸಮಾಧಾನವನ್ನು ರೋಮನ್ ಸೈನ್ಯದಳದಿಂದ ಸ್ಥಾಪಿಸಲು ಆಗಲಿಲ್ಲ.[30]

ಮೊದಲನೆ ಶತಮಾನದ ಪಾಲೇಸ್ತೀನ ಇತಿಹಾಸದ ಹಿನ್ನಲೆಯನ್ನು ಮನಸ್ಸಿನಲ್ಲಿಟ್ಟು ಕೊಂಡು, ಈ ಧನ್ಯತೆಯನ್ನು ಜೋಲೆತೆಯರಿಗೆ ವಿರೋಧವಾಗಿ ನಿರ್ದೇಶನ ಮಾಡಲಾಗಿದೆ ಎಂದು Hagner ರವರು ಸೂಚಿಸಿದರು. ದೌರ್ಜನ್ಯದಿಂದಾರು ಸರಿ, ರೋಮ್ ಸಾಮ್ರಾಜ್ಯ ನಿರ್ದಾಕ್ಷಿಣ್ಯವಾಗಿ ತೆಗೆದುಹಾಕಿ ಇಸ್ರಾಯೇಲ ರಾಜ್ಯವನ್ನು ಪುನಃ ಸ್ಥಾಪಿಸಬೇಕೆಂದು ಯೆಹೂದ್ಯರ ದಂಗೆಗಾರರು ಆಶಿಸಿದ್ದರು (ನೋಡಿರಿ ಯೋಹಾನ 6:15). "ಜೋಲೆತೆಯರು ರಾಜ ಭಕ್ತಿಯುಳ್ಳ 'ದೇವರ ಮಕ್ಕಳೆಂದು' ತಮ್ಮ ಸೈನಿಕದಳದಿಂದ ತೋರಿಸಿಕೊಳ್ಳಬಹುದೆಂದು ನಿರೀಕ್ಷಿಸಿದರು." ಹಾಗಿದ್ದರೂ, ದೇವರ ರಾಜ್ಯವನ್ನು ಆ ರೀತಿಯಲ್ಲಿ ಪರಿಚಯಿಸುವದಿಲ್ಲವೆಂದು ಯೇಸು ಬೋಧಿಸಿದನು. ಅದರ ಬದಲಾಗಿ, ಅದು ದೈವಿಕ ಪ್ರಾರಂಭದೊಂದಿಗೆ ಬರುತ್ತದೆ, ಮತ್ತು ಅದರ ಪ್ರಜೆಗಳು ಸಮಾಧಾನವನ್ನು ಪ್ರೋತ್ಸಾಹಿಸುವವರಾಗಿರುವರು.[31]

ಯೇಸುವಿನ ಹಿಂಬಾಲಕರು ಸಮಾಧಾನದ ಕುರಿತು ಮಾತಾಡುವದು ಮತ್ತು ಕೇಳುವದಕ್ಕಿಂತಲೂ ಹೆಚ್ಚಿನದ್ದನ್ನು ಮಾಡುವವರಾಗಿದ್ದಾರೆ. "ಸಮಾಧಾನವನ್ನು ಪ್ರೀತಿ ಸುವವರು ಧನ್ಯರು" ಅಥವಾ "ಸಮಾಧಾನದ ಕುರಿತು ನಿರೀಕ್ಷೆಯುಳ್ಳವರು ಧನ್ಯರು" ಎಂದು ಯೇಸು ಹೇಳಲಿಲ್ಲ. ಆತನು ತನ್ನ ಶಿಷ್ಯರಿಗೆ ಸಮಾಧಾನ ಎಲ್ಲಿ ಇಲ್ಲವೋ ಅಲ್ಲಿ ಸಮಾಧಾನ ತರುವದಕ್ಕಾಗಿ ಆಹ್ವಾನಿಸಿದನು. ಸರಳವಾಗಿ ಹೋರಾಟ ಬಿಟ್ಟು ಬಿಡುವವರಿಗೆ ಈ ಧನ್ಯತೆ ವಾಗ್ದಾನ ಮಾಡಲಾಗಿರುವುದಿಲ್ಲ. ಅದಕ್ಕೆ ಬದಲಾಗಿ, ಅವರ ಭಿನಭಿಪ್ರಾಯಗಳಲ್ಲಿ ಎದುರಾಗಿರುವವಗಳೆಲ್ಲವು ಜಯಿಸಿರುವವರಿಗೆ ನಿಜವಾದ ಸಂತೋಷ, ಸಮಾಧಾನ, ದೊರಕುವವು. ಸಮಾಧಾನಪಡಿಸುವದಕ್ಕೆ ಸಂಬಂಧಿಸಿದ ಕುರಿತು Barclay ಹೀಗೆ ಗಮನಿಸಿದ್ದಾನೆ:

> ನಾವು ಯಾವ ವಿಷಯದಲ್ಲಿ ಏನು ಮಾಡುತ್ತೇವೋ ಎಂದು ನಾವು ಭಯಪಡುತ್ತೇವೆ ಆದ್ದರಿಂದ ಯಾವ ವಿಷಯವಾದರೂ ನಿಶ್ಚಯವಾಗಿ ಅಂಗೀಕರಿಸಬೇಕೆಂದು ಈ ಧನ್ಯತೆ ಕೋರುವದಿಲ್ಲ, ಆದರೆ ವಿಷಯವು ಕ್ರಿಯಾರೂಪದಲ್ಲಿ ಎದುರಾದರೂ, ಸಮಾಧಾನವು ಎಷ್ಟೇ ಪ್ರಯಾಸದಿಂದ ಸ್ಥಾಪಿಸಲು ಸಾಧ್ಯವಾದರು, ಮಾಡಬೇಕೆಂದು ಅಧಿಕಾರದಿಂದ ಕೇಳಲಾಗುತ್ತದೆ.[32]

ಸಮಾಧಾನಕ್ಕಾಗಿ ಪ್ರೋತ್ಸಾಹಮಾಡುವವರು ದೇವರ ಮಕ್ಕಳೆಂದು ಕರೆಯಲ್ಪಡುವರು ಎಂದು ಯೇಸು ಹೇಳಿದನು. ದೇವರು ಶ್ರೇಷ್ಟ ಸಮಾಧಾನ ಕರ್ತನು ಆಗಿದ್ದಾನೆ, ದೇವರು ತನ್ನ ಒಬ್ಬನೆ ಮಗನನ್ನು ಬಲಿಯಾಗಿ ಅರ್ಪಿಸಿ ಮಾನವ ಕುಲವನ್ನು ತಿರುಗಿ ತನ್ನ ಅನ್ಯೋನ್ಯತೆಗೆ ಬರುವಂತೆ ಮಾಡಿದನು (ರೋಮಾಪುರ 5:1-11; ಎಫೆಸ 2:11-22). ಆತನು "ಶಾಂತಿದಾಯಕನಾದ ದೇವರು" (ಫಿಲಿಪ್ಪಿ 4:9; 1 ಥೆಸಲೋನಿಕ 5:23). ಸಮಾಧಾನ ಪಡಿಸುವವರನ್ನು "ದೇವರ ಮಕ್ಕಳೆಂದು ಕರೆಯಲ್ಪಡುವರು" ಯಾಕೆಂದರೆ ಅವರು ಆತನ ಸ್ವರೂಪವನ್ನು ಹಂಚಿಕೊಂಡಿದ್ದಾರೆ. ದೇವರ ಆತ್ಮನಿಂದ ನಡಿಸಿಕೊಳ್ಳುವವರು ದೇವರ "ಮಕ್ಕಳು" ಎಂದು ಕರೆಯಲ್ಪಡುವರು (ರೋಮಾಪುರ 8:14; ಗಲಾತ್ಯ 3:26, 27), ಅಂತಿಮ ನ್ಯಾಯತೀರ್ಪಿನಲ್ಲಿ ದೇವರು ಸಮಾಧಾನಪಡಿಸುವವರನ್ನು ತನ್ನ ಮಕ್ಕಳೆಂದು ಒಪ್ಪಿಕೊಳ್ಳುವನು.

## ಹಿಂಸೆಗೊಳಗಾದವರು (5:10-12)

**[10]ನೀತಿಯ ನಿಮಿತ್ತವಾಗಿ ಹಿಂಸೆಯನ್ನು ತಾಳಿಕೊಳ್ಳುವವರು ಧನ್ಯರು; ಪರಲೋಕ ರಾಜ್ಯವು ಅವರದು.**

**[11]ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು. [12]ಸಂತೋಷಪಡಿರಿ, ಉಲ್ಲಾಸಪಡಿರಿ; ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವದು; ನಿಮಗಿಂತ ಮುಂಚೆ ಇದ್ದ ಪ್ರವಾದಿಗಳನ್ನೂ ಹೀಗೆಯೇ ಹಿಂಸೆಪಡಿಸಿದರಲ್ಲಾ.**

5:3-12ರಲ್ಲಿ "ಧನ್ಯರು" ಎನ್ನುವ ಪದ ಒಂಬತ್ತು ಸಾರಿ ಕಾಣಿಸಿಕೊಂಡರೂ ಮತ್ತು ಅದರಲ್ಲಿ ವಿಶೇಷವಾಗಿ ಪರಿಭಾಷೆಯ ಒಂಭತ್ತು ಧನ್ಯತೆಯ ವಿಷಯಗಳಿದ್ದರೂ, ಎಂಟನೆಯ (5:10) ಮತ್ತು ಒಂಬತ್ತನೆಯ (5:11, 12) ಧನ್ಯತೆಗಳನ್ನು ಒಂದೇ ಗುಂಪಾಗಿ ಮಾಡಲಾಗಿದೆ ಯಾಕೆಂದರೆ ಅವರೆಡು ಹಿಂಸೆಯ ಕುರಿತಾಗಿ ಮಾತಾಡುತ್ತವೆ. ಮೊದಲಿನ ಎಂಟು ಧನ್ಯತೆ ತೃತಿಯ ಪುರುಷನಲ್ಲಿವೆ ("ಅವರು"), ಆದರೆ ಒಂಬತ್ತನೆಯ ಧನ್ಯತೆ ಅದು ದ್ವಿತೀಯ ಪುರುಷನಲ್ಲಿದೆ ("ನೀನು") ಎಂದು ಹೇಳಲ್ಪಟ್ಟಿದೆ. ಬಹುಶಃ ಯೇಸು ಎಂಟನೆಯ ಧನ್ಯತೆ ಜನರ ಸಮೂಹಕ್ಕೆ ಮತ್ತು ಒಂಬತ್ತನೆಯ ಧನ್ಯತೆ ತನ್ನ ಶಿಷ್ಯರನ್ನು ಉದ್ದೇಶಿಸಿ ಹೇಳಿರಬಹುದು.[33] ಯೇಸು ತನ್ನ ಶಿಷ್ಯರ ಪಾತ್ರವು ಉಪ್ಪು ಮತ್ತು ಬೆಳಕಂತೆ ಇರಬೇಕೆಂದು ಚರ್ಚಿಸುವಾಗ ಆತನನ್ನು ದ್ವಿತೀಯ ಪುರುಷನಾಗಿ ಸಂಭೋದಿಸಿಕೊಂಡನು (5:13-16).

**ವಚನ 10.** ಈ ಅಂತಿಮ ವಚನಗಳಲ್ಲಿ, "ಈ ಧನ್ಯತೆಯ ಕುರಿತು ಇರುವ ವಿರೋಧಾ ಭಾಸವು ಮುಕ್ತಾಯಕ್ಕೆ ಸೇರಿಕೊಳ್ಳುತ್ತಾ ಇದೆ."[34] ಯೇಸು, **ನೀತಿಯ ನಿಮಿತ್ತವಾಗಿ ಹಿಂಸೆಯನ್ನು ತಾಳಿಕೊಳ್ಳುವವರು ಧನ್ಯರು** ಎಂದು ಹೇಳಿದ್ದಾನೆ. "ಹಿಂಸೆ" ಎಂಬ ಗ್ರೀಕ್ ಶಬ್ದಕ್ಕೆ "ಬೆನ್ನಟ್ಟು, ಹೊರಗೆ ಓಡಿಸು ಅಥವಾ ಹಿಂಬಾಲಿಸಿಕೊಂಡೆ ಇರು" ಎಂಬ ಭಾವವಿದೆ. ಈ ಪದಗಳೆಲ್ಲವು ದೈಹೀಕ ಹಿಂಸೆ, ತೊಂದರೆ ಗೋಳಿಸುವಿಕೆ, ಮತ್ತು ಇತರೆ ರೀತಿಯ ಹಿಂಸೆಗಳು ಎಂದು ಹೇಳಲಾಗುತ್ತದೆ.

ಈ ಧನ್ಯತೆಯ ವಾಗ್ದಾನ, **ಪರಲೋಕ ರಾಜ್ಯ,** ಸಾಮಾನ್ಯವಾಗಿ ಹಿಂಸೆ ಹೊಂದಿದವರಿಗೆ ಇದು ಸಿಗುವಂತದಲ್ಲ, ಆದರೆ "ನೀತಿಯ ನಿಮಿತ್ತವೆ ಹಿಂಸೆಗೊಳಗಾದವರಿಗೆ" ಕೊಡುವಂಥದ್ದಾಗಿದೆ. ದುಷ್ಟಕಾರ್ಯಗಳನ್ನು ಮಾಡಿ ಹಿಂಸೆಗೊಳಗಾಗುವವರು ಮತ್ತು ಕ್ರಿಸ್ತನ ನಿಮಿತ್ತ ಹಿಂಸೆಗೆ ಒಳಗಾಗುವರು ಎಂಬುದಾಗಿ ಪೇತ್ರನು ಸ್ಪಷ್ಟವಾಗಿ ವಿಂಗಡಿಸಿದಾನೆ:

> ನೀವು ಕ್ರಿಸ್ತನ ಹೆಸರಿನ ನಿಮಿತ್ತ ನಿಂದೆಗೆ ಗುರಿಯಾದರೆ ಧನ್ಯರೇ; ತೇಜೋಮಯವಾದ ಆತ್ಮನಾಗಿರುವ ದೇವರಾತ್ಮನು ನಿಮ್ಮಲ್ಲಿ ನೆಲೆಗೊಂಡಿದ್ದಾನಲ್ಲಾ ನಿಮ್ಮಲ್ಲಿ ಯಾವನಾದರೂ ಕೊಲೆಗಾರನು ಕಳ್ಳನು ದುಷ್ಟನು ಪರಕಾರ್ಯಗಳಲ್ಲಿ ತಲೆಹಾಕುವವನು ಆಗಿದ್ದು ಶಿಕ್ಷಾಪಾತ್ರನಾಗಬಾರದು. ಆದರೆ ಕ್ರೈಸ್ತನಾಗಿ ಬಾಧೆಪಟ್ಟರೆ ಅವನು ನಾಚಿಕೆಪಡದೆ ಆ ಹೆಸರಿನಿಂದಲೇ ದೇವರನ್ನು ಘನಪಡಿಸಲಿ (1 ಪೇತ್ರನು 4:14-16; ನೋಡಿರಿ 3:14).

**ವಚನ 11.** ಯೇಸು ಹಿಂಸೆಯ ವಿಷಯದ ಮೇಲೆ ಮಾತಾಡುವದನ್ನು ಮುಂದುವರಿಸಿದನು: **ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ, ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು.** ಹಿಂಸೆಯು ಅವಮಾನ ಮತ್ತು ನಿಂದೆ ಸಹ ಒಳಗೊಂಡಿರುತ್ತದೆ. ಲೂಕ 6:22 ಹೆಚ್ಚಿನ ವಿವರಣೆ ಒಳಗೊಂಡಿದೆ: "ಮನುಷ್ಯಕುಮಾರನ ನಿಮಿತ್ತವಾಗಿ ನಿಮ್ಮನ್ನು ಹಗೆಮಾಡಿ ನಿಮಗೆ ಬಹಿಷ್ಕಾರ ಹಾಕಿ ನಿಂದಿಸಿ ನಿಮ್ಮ ಹೆಸರನ್ನು ಕೆಟ್ಟದೆಂದು ತೆಗೆದುಹಾಕಿದರೆ ನೀವು ಧನ್ಯರು ..." "ಅವಮಾನ"ವೆಂದು ಅರ್ಥಕೊಡುವ

ಗ್ರೀಕ್ ಪದವು ಇನ್ನೂ ಗಂಭೀರ ಅವಮಾನವಾಗುವದನ್ನು ಒಳಗೊಂಡಿದೆ; ಅದನ್ನು ಈ ರೀತಿಯಲ್ಲಿ "ದೂಷಿಸಿ" ಅಥವಾ "ನಿಂದಿಸು," ಎಂದು ಸಹ ಅನುವಾದಿಸಬಹುದಾಗಿದೆ. "ಒಬ್ಬನು ಹಲ್ಲನ್ನು ಜೋರಾಗಿ ಉಜ್ಜೀ ಅವಮಾನ" ಮಾಡುವದು ಎಂದು ಇದರ ಅಕ್ಷರಶಃ ಅರ್ಥಕೊಡುತ್ತದೆ.

"ನನ್ನ ನಿಮಿತ್ತ" ಎಂದರೆ ಕ್ರಿಸ್ತನಿಗಾಗಿ ಎಂದರ್ಥವಾಗಿದೆ. ಈ ವಾಕ್ಯ ಭಾಗವು "ನೀತಿಯ ನಿಮಿತ್ತ" ಎನ್ನುವದಕ್ಕೆ ಸರಿಸಮವಾಗಿದೆ (5:10). ಯೇಸು ಅವಮಾನ ಹೊಂದಿದಂತೆಯೇ ತನ್ನ ಶಿಷ್ಯರು ಹೊಂದುವರು ಎಂದು ವಾಗ್ದಾನ ಮಾಡಿದನು. "ಗುರುವಿಗಿಂತ ಶಿಷ್ಯನು ದೊಡ್ಡವನಲ್ಲ, ದಣಿಗಿಂತ ಆಳು ದೊಡ್ಡವನಲ್ಲ" ಎಂದು ಆತನು ಹೇಳಿದನು (10:24). ನಿಮ್ಮನ್ನು ಅವರು ಪಟ್ಟಣದಿಂದ ಪಟ್ಟಣದವರೆಗೆ ಬೆನ್ನಟ್ಟುವರು, ಸೆರೆಮನೆಯಲ್ಲಿ ಹಾಕುವರು, ಸಂಕಷ್ಟಗಳಿಗೆ ಒಡ್ಡುವರು, ಕೊರಡೆಗಳಿಂದ ಹೊಡೆಯುವರು ಮತ್ತು ನಿಮ್ಮನ್ನು ಕೊಲ್ಲಲುಬಹುದು ಎಂದು ಆತನು ತನ್ನ ಶಿಷ್ಯರಿಗೆ ಎಚ್ಚರಿಕೆ ನೀಡಿದನು (10:16-23).

**ವಚನ 12.** ಇಂಥಹಾ ಹಿಂಸೆಯಲ್ಲಿ, ಯೇಸು ತನ್ನ ಹಿಂಬಾಲಕರಿಗೆ, **ಸಂತೋಷ ಪಡಿರಿ**, **ಉಲ್ಲಾಸಪಡಿರಿ** ಎಂದು ಹೇಳಿದನು. "ಆ ದಿನದಲ್ಲಿ ಸಂತೋಷಪಡಿರಿ ಮತ್ತು ಕುಣಿದಾಡಿರಿ" ಎಂದು ಲೂಕ 6:23 ಹೇಳುತ್ತದೆ. ಹಿಂಸೆಯ ಮಧ್ಯದಲ್ಲಿಯೂ ಉಲ್ಲಾಸಿಸುವಾಗ ಅದು ಇಂದಿನ ಶಿಷ್ಯರಿಗೆ ಮೂಲತತ್ವ, ಮತ್ತು ಆದರ್ಶ ಧ್ಯೇಯವಾಗಿದೆ, ಪ್ರಾರಂಭದ ಸಭೆಗಳಲ್ಲಿ ಆ ರೀತಿ ಇರಲಿಲ್ಲ. ಅವರು ಚಡಿ ಏಟುಗಳಿಂದ ಹೊಡೆಸಿಕೊಂಡ ನಂತರ, ಅಪೊಸ್ತಲರು ಹಿರಿ ಸಭೆಯನ್ನು ಬಿಟ್ಟು ಬಿಟ್ಟು "ಆ ಹೆಸರಿನ ನಿಮಿತ್ತವಾಗಿ ಅವಮಾನ ಪಡುವದಕ್ಕೆ ಯೋಗ್ಯರೆನಿಸಿಕೊಂಡೆವೆಂದು ಸಂತೋಷಿಸುತ್ತಿದ್ದರು" (ಅಪೊಸ್ತಲರ ಕೃತ್ಯಗಳು 5:40, 41).

**ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವದು** ಎಂದು ಯೇಸು ವಾಗ್ದಾನ ಮಾಡಿರುವದರಿಂದ ಹಿಂಸೆಯಲ್ಲಿಯೂ, ಉಲ್ಲಾಸಿಸುವ ಕಾರ್ಯವು ಆಗಬೇಕಾಗಿದೆ. ಅತ್ಯಧಿಕವಾದ ಆಶೀರ್ವಾದಗಳಿಗೆ ಹೋಲಿಸುವದಾದರೆ ಕ್ಷಣ ಮಾತ್ರವಿರುವ ನಮ್ಮ ಸಂಕಟಗಳು ಹಗುರವಾಗಿವೆ (2 ಕೊರಿಂಥ 4:17).

ಧನ್ಯತೆಗಳು "ಪರಲೋಕ ರಾಜ್ಯದ" ಆರಂಭದಲ್ಲಿ ಮಾತ್ರವಲ್ಲದೆ, ಅಂತ್ಯದಲ್ಲಿಯೂ ಕೂಡ ಪ್ರಸ್ತಾಪಿಸಲಾಗಿದೆ. ಮೊದಲಿನ ಮತ್ತು ಕೊನೆಯ ಧನ್ಯತೆಯು ಪರಲೋಕಕ್ಕೆ ಸಂಬಂಧಪಟ್ಟ ವಚನಗಳನ್ನು ಒಳಗೊಂಡಿರುತ್ತವೆ: "ಪರಲೋಕ ರಾಜ್ಯ" (5:3, 10) ಮತ್ತು ಪರಲೋಕದಲ್ಲಿ ಬಹುಮಾನ (5:12).

ಯೇಸುವಿನ ಶಿಷ್ಯರು ನಂಬಿಕೆಯಿಂದ ನೀತಿಯ ನಿಮಿತ್ತ ಹಿಂಸೆಯನ್ನು ತಾಳಿಕೊಂಡು ಹಳೆ ಒಡಂಬಡಿಕೆಯ ಪ್ರವಾದಿಗಳ ಸ್ಥಾನವನ್ನು ಪಡೆದರು: **ನಿಮಗಿಂತ ಮುಂಚೆ ಇದ್ದ ಪ್ರವಾದಿಗಳನ್ನು ಹೀಗೆಯೇ ಹಿಂಸೆಪಡಿಸಿದರಲ್ಲಾ.** ಪ್ರವಾದಿಗಳು ದೇವರ ಸಂದೇಶವನ್ನು ಜನರಿಗೆ ಹೇಳಲು ಪ್ರಯತ್ನಿಸಿದ ಸಂದರ್ಭದಲ್ಲಿ ಅವರು ಜನರಿಂದ ತಿರಸ್ಕರಿಸಲ್ಪಟ್ಟರು ಜನರಿಂದ ಬೈಸಿಕೊಂಡರೂ ಸಹ ಅವರು ಕ್ರಿಸ್ತನ ಬೋಧನೆಯನ್ನು ಗಟ್ಟಿಯಾಗಿ ಕೂಗಿ ಹೇಳಿದರು (23:31, 34, 37; ಅಪೊಸ್ತಲರ ಕೃತ್ಯಗಳು 7:52; ಇಬ್ರಿಯ 11:32-38; ಯಾಕೋಬ 5:10, 11). ಇಂಥಹಾ ಹಿಂಸೆ ಹೊಂದಿದವರೆಲ್ಲರೂ ದೇವರಿಂದ ಎತ್ತಿಹಿಡಿಯಲ್ಪಡುವರು.

## ಪಾಠಗಳು

## ಸಂತೋಷವನ್ನು ಹಿಂದಟ್ಟಿಕೊಂಡು ಹೋಗುವದು (5:1-12)

ನಮಗೆ ಸಂತೋಷವು ಹೇಗೆ ಬರುತ್ತದೆ? ನಾವು ಸಂತೋಷವಾಗಿರುವಂತೆ ಮಾಡಲು ಅದು ಇತರರ ಜವಾಬ್ದಾರಿಯಾಗಿದೆಯಾ? ಬಹುಶಃ ಲಾಭ ಬರುವ ಉದ್ಯೋಗ

ಇರುವುದಾದರೆ ಸಂತೋಷ ಬರುವದೋ? ನಮ್ಮ ಆಸೆಗಳನ್ನು ಹೊಂದಿರುವ ಮನೆ ನಾವು ಹೊಂದಿದ್ದರೆ, ಉನ್ನತವಾದ ಜನರ ಸಮೂಹ ಮಧ್ಯದಲ್ಲಿರುವಾಗ, ಅಥವಾ ಲಾಭ ತರುವಂಥಹ ಹಣಕಾಸಿನ ಠೇವಣಿ ಇರುವಾಗ ಸಂತೋಷ ಬರುವದೋ? ಇಲ್ಲ, ಇವುಗಳಲ್ಲಿ ಯಾವುದರಿಂದಲೂ ಬರುವುದಿಲ್ಲ. ವಾಸ್ತವವೆನೆಂದರೆ ಸಂತೋಷಪಡಲು ಹುಡುಕುವಾಗ ಬಹಳ ಅಸಂತೋಷವನ್ನು ಉಂಟುಮಾಡುತ್ತದೆ (1 ತಿಮೋಥೆ 6:9, 10). ಸಂತೋಷವು ಅದು ನಮ್ಮ ಅಂತರಾಳದಿಂದ ಬರುವಂತದ್ದಾಗಿದೆ. ಯಾರು ತಮ್ಮ ಜೀವಿತವನ್ನು ಒಂದು ಅಧೀನತೆಯಲ್ಲಿ ಮತ್ತು ಸಮಬಾಳು ನಡೆಸುತ್ತಾನೋ ಅವನಲ್ಲಿ ನಿಜವಾದ ಸಂತೋಷ ವಿರುತ್ತದೆ. ಇನ್ನು ಬೇರೆ ಮಾತಿನಲ್ಲಿ ಹೇಳುವುದಾದರೆ, ದೇವರೊಂದಿಗೆ ಸರಿಯಾದ ಸಂಬಂಧ ಹೊಂದಿರುವದು ಮತ್ತು ನಮ್ಮ ಸುತ್ತಲಿರುವ ಜನರೊಂದಿಗೆ ಸರಿಯಾದ ಸಂಬಂಧ ಹೊಂದಿರುವಾಗ ನಿಜವಾದ ಸಂತೋಷ ನಮ್ಮಲ್ಲಿ ಬರುತ್ತದೆ.

## ಯೇಸುವಿನ ಬೋಧನೆಗಳಂಥಾಗಿರುವಿಕೆ (5:1-12)

ಮೊದಲು ನಾಲ್ಕು ಧನ್ಯತೆಯ ವಿಷಯಗಳನ್ನು ಮತ್ತಾಯನು ಹೃದಯಕ್ಕೆ ಮತ್ತು ಮನಸ್ಸಿನ ಆಳವಾದ ತತ್ವಕ್ಕೆ ಸಂಬಂಧಿಸಿರುವದನ್ನು ಪಟ್ಟಿಮಾಡಿದ್ದಾನೆ. ಅಂತಿಮದಲ್ಲಿ ಬರುವ ನಾಲ್ಕು ಧನ್ಯತೆಯು ಇತರರೊಂದಿಗೆ ನಾವು ಇರುವ ರೀತಿಯನ್ನು ತೋರಿಸುವಂತವುಗಳಾಗಿವೆ. ಉದಾಹರಣೆಗೆ, ನಾವು ಯಾವಾಗ "ಆತ್ಮದಲ್ಲಿ ಬಡವರಾಗಿರುತ್ತೇವೋ" (5:3), ನಮ್ಮ ಕಡೆಗಿರುವ ದೇವರ ಕರುಣೆಯನ್ನು ಗುರುತಿಸುತ್ತೇವೆ. ಅದು, ನಾವುಗಳು ಇತರರಿಗೆ ಹೆಚ್ಚಿನ ಕರುಣೆಯನ್ನು ತೋರಿಸಲು ಪ್ರೋತ್ಸಾಹಿಸುತ್ತದೆ (5:7). ನಮ್ಮ ಸ್ವಂತ ಪಾಪಗಳನ್ನು ಮತ್ತು ನಿಜವಾಗಿಯು ಅವುಗಳಿಗೆ ಕ್ಷಮೆಯನ್ನು ಬೇಡಿಕೊಳ್ಳಬೇಕೆಂಬುದನ್ನು ಗುರುತಿಸುವದರಿಂದ (5:4) ಶುದ್ಧರಾಗಿ ಜೀವಿಸಲು ನಮಗೆ ಸಾಧ್ಯವಾಗುತ್ತದೆ (5:8). ಆತ್ಮದಲ್ಲಿ ಶಾಂತರಾಗಿರುವದರಿಂದ (5:5) ನಮ್ಮನ್ನು ಸಮಾಧಾನಕ್ಕೆ ನಡೆಸುವಂತವುಗಳನ್ನು ಹುಡುಕುವಂತೆ ಮಾಡುತ್ತದೆ (5:9). ನಿಜವಾಗಿಯು ನಾವು "ನೀತಿಗಾಗಿ ಹಸಿವು ಮತ್ತು ಬಾಯಾರಿಕೆ" ಹೊಂದಿದ್ದರೆ (5:6), ನಾವು ಯೇಸುವಿನ ಹಿಂಬಾಲಕರಾಗಿ ಜೀವಿಸಲು ಕೊಡುವ ಬೆಲೆ ಏನು ಎಂಬುದನ್ನು ಅರ್ಥಮಾಡಿಕೊಳ್ಳುತ್ತೇವೆ (5:10-12). "ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು" ಎಂದು ಪೌಲನು ಬರೆದಿದ್ದಾನೆ (2 ತಿಮೋಥೆ 3:12).

D. Martyn Lloyd-Jones ರವರು ಈ ಧನ್ಯತೆ ಕುರಿತಾಗಿ ನಾಲ್ಕು ಮುಖ್ಯವಾದ ಸತ್ಯಗಳನ್ನು ಗುರುತಿಸಿದ್ದಾರೆ.[35] (1) ಅವರು ಪ್ರತಿಯೊಬ್ಬ ಕ್ರೈಸ್ತನು ಹೇಗೆ ಜೀವಿಸಬೇಕೆಂದು ವರ್ಣಿಸುವವ ರಾಗಿದ್ದರು. (2) ಅವರೆಲ್ಲರು ಪ್ರತಿಯೊಬ್ಬ ಕ್ರೈಸ್ತನು ಅದರಲ್ಲಿ ಆಳವಾಗಿ ಮಗ್ನವಾಗಿರಲು ಉದ್ದೇಶಿಸಿದ್ದರು. (3) ಅವರು ಸ್ವಾಭಾವಿಕ ದೊರಣೆಯುಳ್ಳವರಲ್ಲ; ಆದರೆ ಅವರು ನಮಗೆ ಸ್ವಾಭಾವಿಕವಾಗಿದ್ದರೆ ಬರುವದನ್ನು ವಿರೋಧಿಸಲು ಸಾವಾಲು ಹಾಕಿದ್ದಾರೆ. (4) ಈ ಲೋಕಕ್ಕೆ ಮತ್ತು ಅದರ ದುರಾಶೆಗಳಿಗೆ ಅತೀತವಾಗಿ ಮತ್ತು ನಮ್ಮ ಸುತ್ತಮುತ್ತಲಿರುವವರಿಗಿಂತ ನಿಜವಾಗಿ ವ್ಯತ್ಯಾಸವಾಗಿ ಮತ್ತು ವಿಶೇಷವಾಗಿ ಜೀವಿಸಬೇಕೆಂದು ಅವರು ನಮ್ಮನ್ನು ಕರೆದಿದ್ದಾರೆ.

ಇಂದು ಬಹುತೇಕ ಕ್ರೈಸ್ತರು, ಮತ್ತು ಕರ್ತನ ಸಭೆಯ ಸದ್ಯಸರು, ಅವರು ಸುತ್ತಲು ಇರುವ ಪರಿಸರ ಮತ್ತು ಪ್ರಪಂಚಕ್ಕೆ ಸರಿಹೊಂದಿಕೊಂಡು ಜೀವಿಸಲು ತಮ್ಮ ಸಮಯ ಮತ್ತು ಹಣವನ್ನು ಹಾಳು ಮಾಡುತ್ತಿದ್ದಾರೆ. ನಾವು ಅದನ್ನು ಬಿಟ್ಟು ಕರ್ತವ್ಯ ಬದ್ಧರಾಗಿ ದೂರನಿಂತುಕೊಳ್ಳಬೇಕಾಗಿದೆ (ನೋಡಿರಿ 4:4; 1 ಯೋಹಾನ 2:15-17). ಪ್ರಪಂಚವು ಸಭೆಯನ್ನು ಆಕ್ರಮಿಸುವಂತೆ ನಾವು ಮಾಡಿದ್ದೇವೆ, ಮತ್ತು ಇಂದು ಸಭೆಗಳು ಹೆಚ್ಚಿನ ರೀತಿಯಲ್ಲಿ ಪ್ರಪಂಚದ ರೀತಿಯಲ್ಲಿಯೇ ಇರುತ್ತವೆ. ನೀವು ಲೋಕದಲ್ಲಿದ್ದರೂ "ಈ ಲೋಕದವರಾಗಿರ ಬೇಡಿರಿ" ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು (ಯೋಹಾನ 17:15-17).

## ಕ್ರೈಸ್ತರ ಜೀವಿತ (5:1-12)

ಈ ಮುಂದೆ ಬರುವ ಭಾವಾರ್ಥಗಳನ್ನು ಮುಖ್ಯವಾದ ಅಂಶಗಳಾಗಿ ಉಪಯೋಗಿಸಿ ಧನ್ಯತೆಯ ಮೇಲೆ ಒಂದು ಪಾಠವನ್ನು ತಯಾರಿಸಬಹುದು:

1. ನಮ್ಮ ಅಸಂಪೂರ್ಣವಾದ ಸಂಪನ್ಮೂಲಗಳನ್ನು ಗುರುತಿಸಬೇಕು.
2. ನಮ್ಮ ಪಾಪಗಳು ದೇವರ ಹೃದಯವನ್ನು ಹೊಡೆಯುತ್ತವೆ ಎಂದು ಗ್ರಹಿಸಿಕೊಳ್ಳಬೇಕು.
3. ಸಂಪೂರ್ಣವಾಗಿ ದೇವರಿಗೆ ಸಮರ್ಪಿಸು.
4. ಆತ್ಮೀಕ ಆಹಾರಕ್ಕಾಗಿ ಆತುರದಿಂದ ಆಸೆಯುಳ್ಳವರಾಗಿರಬೇಕು.
5. ಕರುಣೆಯಿಂದಿರಲು ನೆನಪಿಸಿಕೋ.
6. ಹೃದಯದಲ್ಲಿ ಶುದ್ಧವಾಗಿರು.
7. ಸಮಾಧಾನ ಪಡಿಸಲು ನಿರ್ಧರಿಸಿಕೋ.
8. ಹಿಂಸೆಗಳು ಬರುವಾಗ ಉಲ್ಲಾಸಪಡು.

## ದುಃಖಪಡುವವರು ಸಮಾಧಾನ ಹೊಂದುವರು (5:4)

ನಮ್ಮ ಪಾಪ ಬಾರಗಳು ನಮಗೆ ತೊಂದರೆಯನ್ನುಂಟು ಮಾಡುವಾಗ ಅದು ಹೊರಲಾರದಷ್ಟು ಬಾರವಾದ ಹೊರೆಯಾಗುತ್ತದೆ (ನೋಡಿರಿ ಕೀರ್ತನೆ 38:4; 51:3), ಯೇಸು ನಮ್ಮ ಬಾರಗಳನ್ನು ನಮ್ಮಿಂದ ತೆಗೆದುಹಾಕಬಹುದು (ಮತ್ತಾಯ 11:28-30). ನಾವು ವಿಧೇಯತೆಯಿಂದ ಕೂಡಿದ ನಂಬಿಕೆ ಮುಖಾಂತರ ಆತನು ಅನುಗ್ರಹಿಸಿದ ರಕ್ಷಣೆ ಅಂಗೀಕರಿಸಿದ ನಂತರವೇ ನಮ್ಮಲ್ಲಿ ಆತ್ಮೀಕ ಬೆಳವಣಿಗೆಯಾಗುತ್ತದೆ. ನಾವು "ಸಮಾಧಾನ ಹೊಂದಿದ್ದೇವೆ" ಎಂದು ಯೇಸು ಹೇಳಿದ್ದಾನೆ. "ಆದುದರಿಂದ ಕ್ರಿಸ್ತ ಯೇಸುವಿನಲ್ಲಿ ಇರುವವರಿಗೆ ಅಪರಾದ ನಿರ್ಣಯವು ಈಗ ಇಲ್ಲವೇ ಇಲ್ಲ" ಎಂದು ಪೌಲನು ಬರೆದಿದ್ದಾನೆ (ರೋಮಾಪುರ 8:1). ಯೇಸುವಿನ ರಕ್ತವು ನನ್ನ ಎಲ್ಲಾ ಪಾಪಗಳು ತೊಳೆದು ಶುದ್ಧಮಾಡುತ್ತದೆ ಎಂದು ಯಾವಾಗ ಒಬ್ಬ ವ್ಯಕ್ತಿಯು ಗ್ರಹಿಸಿಕೊಳ್ಳುತ್ತಾನೋ ಆಗ ಅವನು ನಂಬಿಕೆಯಲ್ಲಿ, ಪಶ್ಚಾತ್ತಾಪದಲ್ಲಿ, ಮತ್ತು ದೀಕ್ಷಾಸ್ನಾನದ ಮುಖಾಂತರ ಶ್ರೇಷ್ಟ ಉಪಶಮನ ಮತ್ತು ಬಿಡುಗಡೆ ಸ್ವೀಕರಿಸುತ್ತಾನೆ. ಆತನ ವಾಕ್ಯದ ಬೆಳಕಿನಲ್ಲಿ ನಾವು ನಡೆಯುವದಾದರೆ ಮತ್ತು ಆತನಿಗೆ ನಮ್ಮ ಪಾಪಗಳು ಒಪ್ಪಿಕೊಳ್ಳುತ್ತಾ ಇರುವುದಾದರೆ ನಾವು ಆತನ ಆಶೀರ್ವಾದವಾಗಿರುವ ಸಂತೋಷವನ್ನು ಅನುಭವಿಸುವದು ಮುಂದುವರಿಸಬಹುದು (1 ಯೋಹಾನ 1:7-10).

## ನೀತಿಯ ನಿಮಿತ್ತವಾಗಿ ಹಸಿವೆಯಿಂದಿರುವದು ಮತ್ತು ದಾಹದಿಂದಿರುವುದು (5:6)

ರಕ್ಷಣೆ ಹೊಂದಿದವರಿಗೆ ದೇವರು ತನ್ನ ಕೃಪೆಯಿಂದ ಕೊಡುವ ವರವನ್ನು ವರ್ಣಿಸಲು ಈ ವಾಕ್ಯಭಾಗದಲ್ಲಿ "ನೀತಿ" ಎಂಬ ಪದವನ್ನು ಉಪಯೋಗಿಸಲಾಗಿದೆ (2 ಕೊರಿಂಥ 5:21). ನಾವು ನಂಬಿಕೆಯಲ್ಲಿದ್ದು ದೀಕ್ಷಾಸ್ನಾನ ಮಾಡಿಸಿಕೊಂಡು ಕ್ರಿಸ್ತನ ಆಜ್ಞೆಗೆ ವಿಧೇಯರಾಗಿ ಜೀವಿಸುವಾಗ ದೇವರು "ನೀತಿವಂತರು" ಎಂದು ಪ್ರಕಟಿಸುವನು (ರೋಮಾಪುರ 3:21-26; 6:3, 4, 17, 18). ಕ್ರಿಸ್ತನ ತ್ಯಾಗವನ್ನು ನಾವು ಸ್ವೀಕರಿಸುವುದರ ಆಧಾರದ ಮೇಲೆ ದೇವರು ಎರಡು ವಿಷಯಗಳನ್ನು ಮಾಡುತ್ತಾನೆ: ಆತನು ನಮ್ಮ ಕ್ಷಮಿಸಲ್ಪಟ್ಟಿರುವ ಪಾಪಗಳನ್ನು ನಮ್ಮ ವಿರುದ್ಧವಾಗಿ ಆಪಾದಿಸದೆ ಬಿಟ್ಟು ಬಿಡುತ್ತಾನೆ, ಮತ್ತು "ನಮ್ಮ ಕಾರ್ಯಗಳನ್ನು ಹೊರತುಪಡಿಸಿ" "ನೀತಿಯನ್ನು ಕೂಡಿಸುವನು" (ರೋಮಾಪುರ 4:5-9).

"ನೀತಿಯತೆಯು" ಸಹ ದೇವರ ಆಜ್ಞೆಗಳನ್ನು ಕೈಕೊಳ್ಳುವದನ್ನು ಸೂಚಿಸುತ್ತದೆ

(5:10; 6:1; ಲೂಕ 1:6; 2 ತಿಮೋಥೆ 3:16; ಇಬ್ರಿಯ 12:11). ಆತ್ಮೀಯ ಜೀವನಕ್ಕೆ "ಸರಿಯಾಗಿ ಇರುವದನ್ನು" ಬಯಸುವದು ಗುರುತಾಗಿದೆ. ನಾವು ಕ್ರೈಸ್ತರಾಗಿ ಆತ್ಮೀಕ ಜೀವನದಲ್ಲಿ ಉತ್ಕಟವಾದ ಆತ್ಮೀಯ ಆಸೆ ಇರದೆ ಇದ್ದಲ್ಲಿ, ನಾವು ಯಾವ ರೀತಿಯಿಂದ ಇರಬೇಕೆಂದು ದೇವರು ಇಷ್ಟವುಳ್ಳವನಾಗಿದ್ದಾನೋ ಆ ರೀತಿಯಲ್ಲಿರದೆ ಅಲ್ಲಿಂದ ಬಿದ್ದು ಹೋಗುತ್ತೇವೆ. "ಒಳ್ಳೆತನವನ್ನು ಯಾರು ಸಾಧಿಸುತ್ತಾರೋ ಅವರು ಮಾತ್ರವೇ ಆಶೀರ್ವಾದಿಸಲ್ಪಡುವದಾದರೆ, ಯಾರು ಆಶೀರ್ವಾದಿಸಲ್ಪಡುವದಿಲ್ಲ. ಅದರ ಬದಲಾಗಿ ತಪ್ಪುಗಳನ್ನು ಮಾಡುತ್ತಾ, ಮತ್ತು ಸೋಲುಗಳನ್ನು ಅನುಭವಿಸಿದ್ದರೂ ಸಹ ಇನ್ನೂ ಒಳ್ಳೆಯದನ್ನೆ ಪ್ರೀತಿಸಿ ಅದನ್ನೇ ಗಟ್ಟಿಯಾಗಿ ಹಿಡಿದುಕೊಳ್ಳುವದರಿಂದ ಆ ದಿನ ಬರುತ್ತದೆ."[36]

ನಾವು ದೇವರ ವಾಕ್ಯದಿಂದ ತುಂಬಿಸಲ್ಪಟ್ಟವರಾಗಿದ್ದರೆ, ಎಷ್ಟೋ ದಿನಗಳಿಂದ ಆಹಾರ ನೀರು ತೆಗೆದುಕೊಳ್ಳದವನಂತೆ, ಅದಕ್ಕಾಗಿ ಹಸಿದವರಂತೆ ಮತ್ತು ದಾಹಗೊಂಡವರಂತೆ ಇರಬೇಕು. ದೇಹವು ಕ್ಷೀಣಿಸುತ್ತಾ ಇರುತ್ತದೆ ಆದರೆ ಆತ್ಮವು ನಿತ್ಯವಾಗಿ ಇರುವದರಿಂದ, ನಮ್ಮ ಹೊಟ್ಟೆಗಳನ್ನು ತುಂಬಿಸುವದಕ್ಕಿಂತಲೂ ನಮ್ಮ ಆತ್ಮೀಕ ಹಸಿವೆಯನ್ನು ತುಂಬಿಸುವದು ಮುಖ್ಯವಾಗಿದೆ.

## ದೇವರನ್ನು ನೋಡುವದು (5:8)

ನಾವು ನೋಡಬೇಕಾಗಿರುವದನ್ನು ಆಶೀಸಿ ನೋಡುವದು ನಿರ್ವಿವಾದವಾಗಿದೆ. ಅದನ್ನು ಒಬ್ಬ ವಿಶ್ವಾಸಿ ಆಕಾಶವನ್ನು ನೋಡಿ ಅವಲೋಕಿಸುವಾಗ, ಅವನು ದೇವರ ಕೈಕೆಲಸಗಳನ್ನು ನೋಡುತ್ತಾನೆ (ಕೀರ್ತನೆ 19:1). ಒಬ್ಬ ನಾಸ್ತಿಕನು ಅನಂತವಾದ ಆಕಾಶ ಮತ್ತು ಅದರ ಕಪ್ಪುತನದ ಶೂನ್ಯತೆಯನ್ನು ನೋಡುತ್ತಾನೆ. ಹೂಗಳನ್ನು ಪ್ರೀತಿಸುವವನು ಅದರ ಸುಂದರವನ್ನು ಮತ್ತು ಅದರ ಸುವಾಸನೆಯನ್ನು ನೋಡಬಹುದು, ಆದರೆ ಒಬ್ಬ ತರಬೇತಿ ಹೊಂದಿದ ಸಸ್ಯಶಾಸ್ತ್ರಜ್ಞನು ಅದರ ಜೀವಶಾಸ್ತ್ರಗಳ ಹೆಸರಿನಿಂದ ಕರೆಯಬಹುದು ಮತ್ತು ಅದರೊಳಗೆ ಇರುವ ಗುಣಲಕ್ಷಣಗಳನ್ನು ಚರ್ಚೆಮಾಡುತ್ತಾನೆ. ಒಂದು ಕಲೆಯ ಭಾಗವನ್ನು ಅವಲೋಕಿಸಿದಾಗ, ಕಲೆಯ ವಿಮರ್ಷಕ ಅತ್ಯುತ್ತಮವಾದ ಕಲೆಯನ್ನು ನೋಡಬಹುದು, ಒಬ್ಬ ತರಬೇತಿ ಇಲ್ಲದವನು ನೋಡುವಾಗ ಕೇವಲ ಅದರ ಬಣ್ಣಗಳನ್ನು ಮತ್ತು ಹೊರನೋಟವನ್ನು ನೋಡಿ ಗಮನಿಸುವನು. ಅಂತಿಮವಾಗಿ ದೇವರು ಆತನು ನಿತ್ಯತ್ವದಲ್ಲಿದ್ದಾನೆಂದು ನೋಡುವದು ಸಂತೋಷದ ಸಂಗತಿಯಾಗಿದೆ, ಆದರೆ ಆತನನ್ನು ಸರಳವಾದ ವಿಷಯಗಳಲ್ಲಿ ನೋಡುವದರಿಂದ ನಮ್ಮ ಪ್ರಯಾಣವು ಹೆಚ್ಚು ಫಲದಾಯಕವಾಗಿರುತ್ತದೆ. ನಮ್ಮ ಸುತ್ತಲೂ ಆತನ ಕೈ ಕೆಲಸವನ್ನು ನೋಡಬಹುದು (ರೋಮಾಪುರ 1:20) ಮತ್ತು ನಮ್ಮ ಜೀವಿತದಲ್ಲಿ ಆತನ ಕಾರ್ಯಗಳು ನಮಗೆ ದೇವಾನುಗ್ರಹವಾಗಿವೆ (ರೋಮಾಪುರ 8:28).

## ನಿಜವಾಗಿ ಸಮಾಧಾನಪಡಿಸುವವರು (5:9)

ನಮಗೆ ಸಮಾಧಾನಪಡಿಸುವ ಅಥವಾ ಸಮಸ್ಯೆಯನ್ನುಂಟುಮಾಡುವ ಯಾವುದಾದರು ಒಂದು ಸಾಮರ್ಥ್ಯ ಇರುತ್ತದೆ. ಸಮಾಧಾನ ಬೇಕು ಎಂದು ಹೇಳುವವರು ನಿಜವಾಗಿ ಅವರೆಲ್ಲರು ಸಮಾಧಾನ ಪಡಿಸುವವರು ಆಗಿರುವುದಿಲ್ಲ. ಸಮಾಧಾನ ಬೇಕೆಂದು ಕೇಳುವ ಅನೇಕರು ಯುದ್ಧಕ್ಕಾಗಿ ಕೇಳುವವರಾಗಿದ್ದಾರೆ. ಯೇಸು ಸಮಾಧಾನವನ್ನು ತರಲು ಅದರಲ್ಲಿ ಭಾಗಿಗಳಾಗಿ ಕಾರ್ಯಮಾಡುವದರ ಕುರಿತು ಮಾತಾಡುತ್ತಿದ್ದಾನೆ ಹೊರತು ಅದಕ್ಕಾಗಿ ನಿಷ್ಕ್ರಿಯೆಯುಳ್ಳವರ ಕುರಿತು ಮಾತಾಡುತ್ತಾ ಇಲ್ಲ. ನಾವು ಕೇವಲ ಸಮಾಧಾನವಾಗಿರುವದಕ್ಕಾಗಿ ಕರೆಯಲ್ಪಡದೆ ನಾವು ಸಮಾಧಾನ ಪಡಿಸುವವರಾಗಿರಬೇಕೆಂದು ಆತನು ಕರೆಯುತ್ತಿದ್ದಾನೆ.

ಈ ಧನ್ಯತೆಗಿಂತಲೂ ಉತ್ತಮವಾದ ಸಂದೇಶವನ್ನು ನಾವು ಜೀವಿಸುವ ನವಯುಗದ ಈ ಪ್ರಪಂಚಕ್ಕೆ ಬಹುಶಃ ಇದಕ್ಕಿಂತ ಯುಕ್ತವಾದ ಸಂದೇಶವು ಮತ್ತೊಂದಿಲ್ಲ: "ಸಮಾಧಾನ

ಪಡಿಸುವವರು ಧನ್ಯರು'' (5:9). ಸ್ಥಿರವಾದ ಯುದ್ಧದ ಭಯ ಮತ್ತು ಎಲ್ಲಾ ರೀತಿಯ ಅಸಂತೋಷ, ಗಲಬೆ, ವೈಮನಸ್ಸು ಯಾಕೆ ಮನುಷ್ಯರ ಮಧ್ಯದಲ್ಲಿ ಇದೆ? ಈ ಧನ್ಯತೆ ಪ್ರಕಾರ, ಪ್ರಶ್ನೆಗೆ ಒಂದೇ ಒಂದು ಉತ್ತರವಿದೆ ಅದುವೆ - ಪಾಪ. ನಮ್ಮ ಎಲ್ಲಾ ಸಮಸ್ಯೆಗಳ ವಿವರಣೆಯೆ ಮಾನವನ ದುರಾಶೆ, ಧನಲೋಭಾ, ಸ್ವಾರ್ಥ ಮತ್ತು ಸ್ವಯಂ - ಕೇಂದ್ರೀಕೃತ; ಎಲ್ಲಾ ಸಮಸ್ಯೆಗಳಿಗೆ ಮತ್ತು ವೈಷಮ್ಯಗಳಿಗೆ ಇದುವೆ ಮುಖ್ಯ ಕಾರಣ, ವ್ಯಕ್ತಿಗಳ ಮಧ್ಯೆ ಇಲ್ಲವೇ ಗುಂಪುಗಳ ಮಧ್ಯೆ ಅಥವಾ ದೇಶಗಳ ಮಧ್ಯೆದಲ್ಲಿ ಅದುವೆ ಕಾರಣ. ಮನುಷ್ಯನಿಗೆ ಮತ್ತು ಪಾಪಕ್ಕೆ ಸಂಬಂಧಿಸಿದ ಹೊಸ ಒಡಂಬಡಿಕೆಯ ಸಿದ್ಧಾಂತ ಸ್ವೀಕರಿಸದ ಹೊರತು ನಾವು ಇಂದಿನ ಪ್ರಪಂಚದ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಲಾಗುವದಿಲ್ಲ.

"ಸಮಾಧಾನಕ್ಕೂ ಅನುಕೂಲವಾದ ... ವಿಷಯಗಳನ್ನು ಸಾಧಿಸಿಕೊಳ್ಳುವವರೆಂದು'' ದೇವರ ಮಗುವು ಕರೆಯಲ್ಪಟ್ಟಿದ್ದಾನೆ (ರೋಮಾಪುರ 14:19). ಸಾಧ್ಯವಾದರೆ ವಿಶ್ವಾಸಿಗಳು ನಿಮ್ಮಂದಾಗುವ ಮಟ್ಟಿಗೆ "ಎಲ್ಲರ ಸಂಗಡ'' ಸಮಾಧಾನದಿಂದಿರಿ (ರೋಮಾಪುರ 12:18). "ಸಮಾಧಾನ'' ಎನ್ನುವಂಥದ್ದು ಒಬ್ಬ ವ್ಯಕ್ತಿಯು ಪವಿತ್ರಾತ್ಮನಿಂದ ನಡಿಸಲ್ಪಟ್ಟವನ ಜೀವನದಲ್ಲಿ ಉಂಟಾಗುವ ದೇವರಾತ್ಮನ ಫಲವಾಗಿದೆ (ಗಲಾತ್ಯ 5:22). "ಸಮಾಧಾನವೆಂಬ ಬಂದನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಆಸಕ್ತರಾಗಿರಿ'' ಎಂದು ಎಫೆಸದಲ್ಲಿದ್ದ ಸಭೆಗೆ ಪೌಲನು ಒತ್ತಾಯಪಡಿಸಿ ಹೇಳಿದ್ದಾನೆ (ಎಫೆಸ 4:3).

ಯೇಸುವಿನ ಹೇಳಿಕೆಯನ್ನು ಅಂತರಾಳದಲ್ಲಿ ಸಮಾಧಾನ ಹೊಂದಲು ಮತ್ತು ದೇವರೊಂದಿಗೆ ಸಮಾಧಾನದಿಂದ ಇರುವದಕ್ಕೆ ಅಳವಡಿಸಿಕೊಳ್ಳಬಹುದು. "ದುಷ್ಟರಿಗೆ ಸಮಾಧಾನವೇ ಇಲ್ಲ'' ಎಂದು ಯೆಶಾಯನು ಹೇಳಿದ್ದಾನೆ (ಯೆಶಾಯ 48:22). ನಮ್ಮ ಪಾಪಗಳು ಕ್ಷಮಿಸಲ್ಪಟ್ಟು ನಾವು ನಮ್ಮ ಸೃಷ್ಟಿಕರ್ತನೊಂದಿಗೆ ಸಮಾಧಾನದಿಂದ ಇರುವತನಕ ನಮ್ಮೊಳಗೆ ಸಮಾಧಾನವಿರಲು ಸಾಧ್ಯವಾಗದ ಪರಿಸ್ಥಿತಿ ಇರುತ್ತದೆ. ಸುವಾರ್ತೆಗೆ ವಿಧೇಯರಾದ ತರುವಾಯ, ಪ್ರಾರ್ಥನೆಯಲ್ಲಿ ನಾವು ಎಲ್ಲಾ ಚಿಂತೆಗಳನ್ನು ದೇವರಿಗೆ ತಿಳಿಯಪಡಿಸಿದಾಗ "ಎಲ್ಲಾ ಗ್ರಹಿಕೆಯನ್ನು ಮೀರುವ ದೇವರ ಶಾಂತಿ'' ಹೊಂದಬಹುದು (ಫಿಲಿಪ್ಪಿ 4:6, 7).

## ಹಿಂಸೆಯ ವಿವಿಧ ಮುಖಗಳು (5:10-12)

"ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು'' ಎಂದು ಪೌಲನು ಹೇಳಿದ್ದಾನೆ (2 ತಿಮೊಥೆ 3:12; ನೋಡಿರಿ ಯೋಹಾನ 15:20; 1 ಥೆಸಲೋನಿಕ 3:3, 4). ಕ್ರೈಸ್ತರ ವಿರುದ್ಧವಾಗಿ ಅನೇಕ ಬೇರೆ ಬೇರೆ ರೀತಿಯ ಹಿಂಸೆಗಳು ಎದುರಾಗುತ್ತವೆ ಎಂದು ಯೇಸು ಮತ್ತಾಯ 5:10, 11ರಲ್ಲಿ ಪ್ರಸ್ತಾಪಿಸಿ ಹೇಳಿದ್ದಾನೆ.

*ಕ್ರೈಸ್ತರು ದೈಹೀಕವಾಗಿ ಹಿಂಸಿಸಲ್ಪಡುವರು.* ಆದಿ ಕ್ರೈಸ್ತರು ಶಿಲುಬೆಗೆ ಹಾಕಲ್ಪಟ್ಟರು, ಗೂಟಕ್ಕೆ ಕಟ್ಟಿ ಸುಟ್ಟರು, ಅವರನ್ನು ರೋಮನ್ ಯುದ್ಧರಂಗದಲ್ಲಿ ಒಟ್ಟಿಗೆ ಕೂಡಿ ಹಾಕಿ ಪ್ರಾಣಿಗಳು ತಿಂದುಹಾಕುವದನ್ನು ನೋಡಿ ಸಾರ್ವಜನಿಕರು ತಮಾಷೆ ಮಾಡುತ್ತಿದ್ದರು, ಅಥವಾ ಯುದ್ಧ ಸ್ಥಳದಲ್ಲಿ ಬೆಳಕು ಬೇಕಾಗುವಾಗ ಅವರನ್ನು ಸುಡುತ್ತಾ ಆ ಬೆಳಕನ್ನು ರಾತ್ರಿಯನ್ನು ಅನುಭವಿಸುತ್ತಿದ್ದರು.[37]

*ಕ್ರೈಸ್ತರು "ಅವಮಾನಿಸಲ್ಪಡುವರು."* ನಾವು ನೀತಿಯುಳ್ಳವರಾಗಿ ಜೀವಿಸುವಾಗ ಲೋಕದ ಪ್ರಕಾರವಾಗಿ ಜೀವಿಸುವವರಿಂದ ನಾವು ಅವಮಾನಕ್ಕೆ ಮತ್ತು ಹಿಂಸೆಗೆ ಗುರಿಯಾಗುವೆವು (ಯೋಹಾನ 15:18-20).

*ಕ್ರೈಸ್ತರ ಕುರಿತು ಸುಳ್ಳಾಡಬಹುದು.* ದುಷ್ಟ ಜನರು ತೆರೆದ ಮನಸ್ಸಿನಿಂದ ಮಾತಾಡುವ ಬದಲಾಗಿ ಕ್ರೈಸ್ತರ ಬಗ್ಗೆ ಹಿಂದಿನಿಂದ ಗುಣಗುಟ್ಟುವವರಾಗಿದ್ದಾರೆ. ಸಾರ್ವಜನಿಕ ದಾಳಿ ಎಷ್ಟು

ಹಾನಿಕರವಾಗಿದೆಯೋ ಅಷ್ಟೇ ನೋವು ಮಾಡುತ್ತದೆ, ನಮ್ಮನ್ನು ನಾವು ರಕ್ಷಿಸಿಕೊಳ್ಳಲು ನಮಗೆ ಅವಕಾಶಕೊಡುವದಿಲ್ಲ. ನಾವು ಅದೆಲ್ಲವನ್ನು ತಿಳಿದುಕೊಳ್ಳುವ ಮೊದಲೇ ಅವರು ಆಕ್ರಮಣ ಮಾಡಿ "ಹಿಂದಿನಿಂದ ಚುಚ್ಚಿ" ಇದೆಲ್ಲ ಮಾಡುವವರಾಗಿದ್ದಾರೆ.

ಹಾಗಾದರೆ ಹಿಂಸೆಗೆ ನಾವು ಹೇಗೆ ಪ್ರತಿಕ್ರಿಯಿಸಬೇಕು? "ಸಂತೋಷಪಡಿರಿ ಮತ್ತು ಉಲ್ಲಾಸಪಡಿರಿ" ಎಂದು ಯೇಸು ಹೇಳಿದನು (5:12). "ನೋವಿನಲ್ಲಿ ನಗು ಮತ್ತು ಸಹಿಸಿಕೋ" ಎನ್ನುವಂಥ ನಿಜವಾದ ಅರ್ಥ ಆತನದಲ್ಲ. ನಾವು ಉಲ್ಲಾಸಪಡುವದಕ್ಕೆ ಕಾರಣವನ್ನು ನಮಗೆ ಜ್ಞಾಪಿಸುತ್ತಾನೆ: "ಪರಲೋಕದಲ್ಲಿರುವ ಬಹುಮಾನ ಶ್ರೇಷ್ಟ ವಾಗಿದೆ" ಎಂಬುದು ನಿಜವಾದದ್ದಾಗಿದೆ. ನಮ್ಮ ಅಂತಿಮ ಬಹುಮಾನ ಪರಲೋಕದಲ್ಲಿ ನಿತ್ಯನಿವಾಸವಾಗಿದೆ, ಆದರೆ ನಮ್ಮ ಎಲ್ಲಾ ಬಹುಮಾನ ಭವಿಷ್ಯದಲ್ಲಿ ಇದೆ ಎನ್ನುವಂಥದ್ದಲ್ಲ (ಮಾರ್ಕ 10:29, 30). ಇಂದು ಕ್ರಿಸ್ತನಲ್ಲಿ ನಮಗೆ ಸಮೃದ್ಧಿ ಜೀವಿತ ಮತ್ತು ಆತ್ಮೀಕ ಆಶೀರ್ವಾದಗಳು ಇವೆ (ಯೋಹಾನ 10:10; ಎಫೆಸ 1:3).

## ಹಿಂಸೆ (5:10-12)

ನಾವು ಅನೇಕ ಸಾರಿ ಉತ್ತಮ ಪ್ರಜ್ಞೆಯ ಕೊರತೆಯಿಂದಾಗಿ, ಮುರ್ಖತನದಿಂದ, ಅಥವಾ ದೊಡ್ಡ ತಪ್ಪುಮಾಡುವದರಿಂದ, ಶ್ರಮೆಯನ್ನು ಹೊಂದುತ್ತೇವೆ. ದುಷ್ಟಕಾರ್ಯಗಳ ಫಲಿತವಾಗಿ ಅನುಭವಿಸುವವಗಳನ್ನು ಕೆಲವರು ನಂಬಿಕೆಗಾಗಿ ಹಿಂಸೆಗೊಳಗಾಗುತ್ತಾರೆಂದು ನಂಬುತ್ತಾರೆ (ನೋಡಿರಿ 1 ಪೇತ್ರ 4:14-16). ಇಂಥವರು ಹುತಾತ್ಮರಂತೆ ನಟಿಸುತ್ತಾರೆ. ಆ ರೀತಿಯ "ದುಷ್ಟತನ" ಇತರೆ ಜನಗಳ ಮೇಲೆ ಹಿಂಸೆಯನ್ನು ತರುವದಕ್ಕೆ ಆಹ್ವಾನಿಸಿದಂತೆ ಆಗುತ್ತದೆ. ಇಂಥವರ ಕುರಿತು Robinson ಹೀಗೆ ಹೇಳಿದ್ದಾರೆ, "ಅವರು ಬಹಳ ಶ್ರದ್ಧೆಯುಳ್ಳ ಜನರು, ಧರ್ಮದೊಂದಿಗೆ ಮೇಲ್ನೋಟಕ್ಕೆ ತೋರಿಸಿಕೊಳ್ಳುವವರು, ಬಹುಶಃ ಈ ತೋರಿಕೆಯು ಅವರ ಜೇಬನ್ನು ದಾಟಿ ಹೊರಗಡೆ ಹೋಗುವದಿಲ್ಲ. ಅವರು ಶಿಲುಬೆಯ ಅಪಮಾನ ನಾವೇ ಹೊರುತ್ತಿದ್ದೇವೆ ಎಂದು ಯೋಚಿಸಬಹುದು, ಆದರೆ ಅವರು ಕೇವಲ ಹೊರಗಿನ ಅಪಮಾನ ಹೊರುವವರಾಗಿದ್ದಾರೆ."[38]

ನಾವು ಇತರರ ಮನಸ್ಸು ನೋಯಿಸುವ ವಿಷಯದಲ್ಲಿ ಅಪಮಾನ ವಾಗುವ ರೀತಿಯಲ್ಲಿ ನಡೆಯುವದರಲ್ಲಿ, ಅವಮಾನವಾಗುವ ಬಟ್ಟೆ ಧರಿಸುವದರಲ್ಲಿ, ಅಥವಾ ಅಪಮಾನವಾಗುವಂತೆ ಮಾತಾಡುವದರಲ್ಲಿ ನಾವು ಎಚ್ಚರವಾಗಿರಬೇಕು. ಅಪಮಾನವಾಗುವ ರೀತಿಯಲ್ಲಿ ನಾವು ಪ್ರವರ್ತಿಸುವವರಾದರೆ ಮತ್ತು ನಮ್ಮನ್ನು ತಿರಸ್ಕರಿಸುವಂತೆ ಅಥವಾ ನಮ್ಮನ್ನು ಕೀಳಾಗಿ ನೋಡುವಂತೆ ಇತರರನ್ನು ಮನನೋಯಿಸುವದಾದರೆ, ಅವರು ನಮ್ಮನ್ನು ಹಿಂಸಿಸುವವರಾಗಿಲ್ಲ. ನಿಜವಾಗಿ, ನಾವು ನಮ್ಮ ವೈಯಕ್ತಿಕ ಪ್ರವರ್ತನೆಯಿಂದ ಹಿಂಸೆಪಡುತ್ತೇವೆ. ಅಂಥಹಾ ಪರಿಸ್ಥಿತಿಗಳನ್ನು ಯೇಸು ಆಶೀರ್ವಾದಿಸುವುದಾಗಿ ನಮಗೆ ಹೇಳಲಿಲ್ಲ.

---

ಟಿಪ್ಪಣಿಗಳು

[1]R. T. France, *The Gospel According to Matthew*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 106-7. [2]Leon Morris, *The Gospel According to Matthew*, Pillar Commentary (Grand Rapids, Mich.: Wm. B. Eerdmans Publishing Co., 1992), 95. [3]Donald A. Hagner, *Matthew 1-13*, Word Biblical Commentary, vol. 33A (Dallas: Word Books, 1993), 84. [4]ಎರಡು ಪ್ರಸಂಗಗಳ ಒಂದೇ ರೀತಿಯ ಕ್ರಮಗಳಿಗಾಗಿ ಈ ಪಟ್ಟಿಯನ್ನು ನೋಡಿರಿ G. N. Stanton, "Sermon on the Mount/Plain," in *Dictionary of Jesus and the Gospels*, ed. Joel B. Green and Scot

McKnight (Downers Grove, Ill.: InterVarsity Press, 1992), 736. [5]Jack P. Lewis, *The Gospel According to Matthew*, Part 1, The Living Word Commentary (Austin, Tex.: Sweet Publishing Co., 1976), 78. [6]ಮತ್ತಾಯ 5:14, 17, 19-24, 27-31, 33-38, 41, 43, 45, 47; 6:1-8, 14-18; 7:6, 12ಬಿ, 15, 22, 23. [7]R. T. France ರವರು ಹೇಳಿದ್ದು ಆನಂದವು ಅದು ನಮ್ಮ "ನಿಜವಾದ ಶಿಷ್ಯನ" ಮತ್ತು "ಪ್ರಪಂಚ ವ್ಯಕ್ತಿಯ" ನಡತೆ ಕುರಿತು ವರ್ಣಿಸುತ್ತದೆ (France, 109). [8]Frank L. Cox, *Sermon Notes on The Sermon on the Mount* (Nashville: Gospel Advocate Co., 1955), 7. [9]ಯೇಸುವಿನ ಹಿಂಬಾಲಕರು ಅನೇಕರು "ಶಿಷ್ಯರು" ಎಂದು ಕರೆಯಿಸಿ ಕೊಳ್ಳಲು ತೋರಿಸಿಕೊಳ್ಳುತ್ತಾರೆ, ಆದರೆ ಅವರು ಬೇರೆ ಬೇರೆ ರೀತಿಯ ಸಮರ್ಪಣೆಗಳನ್ನು ಹೊಂದಿರುತ್ತಾರೆ ಮತ್ತು ಬೇರೆ ಬೇರೆ ರೀತಿಯ ಅನೇಕ ಕಾರಣದಿಂದ ಆತನನ್ನು ಹಿಂಬಾಲಿಸುತ್ತಾರೆ. ಆಳವಿಲ್ಲದ ಶಿಷ್ಯತ್ವ ಹೊಂದಿರುವದರಿಂದ ಅವರು ಬೇಗನೆ ಆತನನ್ನು ಹಿಂಬಾಲಿಸುವದನ್ನು ಬಿಟ್ಟು ಬಿಡುತ್ತಾರೆ (ಯೋಹಾನ 6:66-68). [10]Douglas R. A. Hare, *Matthew*, Interpretation (Louisville: John Knox Press, 1993), 35.

[11]William Barclay, *The Gospel of Matthew*, vol. 1, 2d ed., The Daily Study Bible (Philadelphia: Westminster Press, 1958), 79. [12]ಕೀರ್ತನೆ 14:4-6; 22:26; 34:6; 35:10; 37:14, 15; 40:17; 82:2, 3; 86:1, 2; 112:9; 113:7; 140:12, 13. [13]Hagner, 91. [14]William Barclay, *A New Testament Wordbook* (New York: Harper & Brothers, n.d.), 104. [15]Barclay, *Matthew*, 93. [16]Ibid. [17]Robert H. Mounce, *Matthew*, New International Biblical Commentary (Peabody, Mass.: Hendrickson Publishers, 1991), 39. [18]Ibid. [19]James McGill, "Blessed Are the Meek," *Spiritual Sword Lectures* (1982): 32. [20]Hagner, 93.

[21]Morris, 99. [22]John MacArthur, Jr., *The MacArthur New Testament Commentary: Matthew 1-7* (Chicago: Moody Press, 1985), 178. [23]ಪ್ರಾಚೀನ ರೋಮಾದಲ್ಲಿರುವ ಸ್ಟೊಯಿಕರು "ಪುರುಷತ್ವವನ್ನು" ಅಥವಾ "ಸದ್ಗುಣ"ವನ್ನು ಒತ್ತಿ ಹೇಳಿದರು. ಇದು ಗ್ರೀಕ್‌ನಲ್ಲಿ ಹುಟ್ಟಿ ರೋಮದಲ್ಲಿ ಪ್ರಸಿದ್ಧಿಯಾಗಿದೆ ಎಂದು ಗ್ರೀಕ್‌ನ ಇಬ್ಬರು ತತ್ವಜ್ಞಾನಿಗಳು ಆಲೋಚಿಸುತ್ತಾರೆ. Panaetius (185-110 ಕ್ರಿ.ಪೂ.) ಮತ್ತು Posidonius (135-51 ಕ್ರಿ.ಪೂ.) Diogenes ಎಂಬ ಗ್ರೀಕ್ ಬರಹಗಾರನು "ಕನಿಕರ" ಅಥವಾ "ಕರುಣಜನಕ" ಎಂಬವುಗಳನ್ನು ಆತ್ಮದ ಸ್ವರಗಳೊಂದಿಗೆ ಸೇರಿ ಸಿದರು. (Diogenes Laertius *Lives of Eminent Philosophers* 7.115.) [24]Talmud *Shabbath* 151b. [25]Robert H. Gundry, *Matthew: A Commentary on His Literary and Theological Art* (Grand Rapids, Mich.: Wm. B. Eerdmans Publishing Co., 1982), 71. [26]MacArthur, 191. [27]Haddon W. Robinson, *The Christian Salt & Light Company* (Grand Rapids, Mich.: Discovery House Publishers, 1988), 65. [28]Michael J. Wilkins, "Matthew," in *Zondervan Illustrated Bible Backgrounds Commentary*, vol. 1, *Matthew, Mark, Luke*, ed. Clinton E. Arnold (Grand Rapids, Mich.: Zondervan, 2002), 35. [29]Lewis, 83. [30]Hare, 42.

[31]Hagner, 94. [32]Barclay, *Matthew*, 104. [33]ಪರ್ವತ ಪ್ರಸಂಗದಲ್ಲಿನ ನಾಲ್ಕು ಧನ್ಯತೆಗಳು ದ್ವಿತಿಯ ಪುರುಷನಲ್ಲಿವೆ (ಲೂಕ 6:20-23). [34]Hagner, 94. [35]D. Martyn Lloyd-Jones, *Studies in the Sermon on the Mount*, vol. 1 (Grand Rapids, Mich.: Wm. B. Eerdmans Publishing Co., n.d.), 32-39. [36]Pat Ott, "Attitudes from the Beatitudes," *Christian Woman* (January/February 1986): 33. [37]ನೋಡಿ William Byron Forbush, ed., *Fox's Book of Martyrs* (Philadelphia: Universal Book and Bible House, 1926). [38]Robinson, 89.